ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

ಸಂಪಾದಕರು: ಸುಂದರ್ Editor : Sundar

Volume: 01, Issue: 55 RNI Number : KNKAN/25/A2770 01-03-2026 Sunday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :55 ರಾಯಚೂರು 01-03-2026 ರವಿವಾರ ಪುಟ 04 ಬೆಲೆ ರೂ.2/- ಮೊ:8660146563

ಸಾಮಾನ್ಯರನ್ನು ಅಸಾಮಾನ್ಯರನ್ನಾಗಿ ಮಾಡುವ ಶಕ್ತಿ ಇರುವುದು ಶಿಕ್ಷಕರಿಗೆ ಮಾತ್ರ : ಸಿಎಂ

ಬೆಂಗಳೂರು, ಫೆ. 28-

ಶಿಕ್ಷಕರ ಶೈಕ್ಷಣಿಕ ಸಮ್ಮೇಳನದಲ್ಲಿ ಉತ್ತಮ ಸಮಾಜ ನಿರ್ಮಾಣ ಮಾಡುವ ಜವಾಬ್ದಾರಿ ವ್ಯಕ್ತವಾಗಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದಿಲ್ಲಿ ಆಶಿಸಿದ್ದಾರೆ.

ಶನಿವಾರ ಇಲ್ಲಿನ ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ವತಿಯಿಂದ ಆಯೋಜಿಸಲಾಗಿದ್ದ ರಾಜ್ಯಮಟ್ಟದ ಶೈಕ್ಷಣಿಕ ಮಹಾಸಮ್ಮೇಳನ ಹಾಗೂ ಸುವರ್ಣ ಮಹೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಕರು ದೇಶದ ಭವಿಷ್ಯವನ್ನು ರೂಪಿಸುವವರು ಎಂದು ಬಣ್ಣಿಸಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಶೇ.12ರಿಂದ ಶೇ.15ರಷ್ಟಿದ್ದ ಶಿಕ್ಷಣದ ಪ್ರಮಾಣ ಪ್ರಸ್ತುತ ಶೇ.74ರಷ್ಟಿದೆ. ಶಿಕ್ಷಣ ಕ್ಷೇತ್ರವನ್ನು ಅವಲೋಕಿಸಿದಾಗ ಗುಣಮಟ್ಟದ, ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುವ ಒದಗಿಸುವ ಶಿಕ್ಷಣ ದೊರಕುತ್ತಿದೆಯೇ ಎಂದು ಯೋಚಿಸಬೇಕು. ಇದು ಶಿಕ್ಷಕರ ತಪ್ಪಲ್ಲ, ವ್ಯವಸ್ಥೆಯ ಪರಿಣಾಮವಾಗಿ ಜಾತಿ ವ್ಯವಸ್ಥೆ ಸಮಾಜದಲ್ಲಿ ಭದ್ರವಾಗಿ ನೆಲೆಯೂರಿರುವುದರಿಂದ ಶಿಕ್ಷಣದಲ್ಲಿ ನಿರೀಕ್ಷಿಸಿದಷ್ಟು ಬದಲಾವಣೆ ಮಾಡಲು ಸಾಧ್ಯವಾಗಿಲ್ಲ ಎಂದು ಅವರು ತಿಳಿಸಿದರು.

ವೈಜ್ಞಾನಿಕ-ವೈಚಾರಿಕ ಶಿಕ್ಷಣ ದೊರೆಯಬೇಕು: ನಮ್ಮ ಸಂವಿಧಾನವು ಒಬ್ಬ ವ್ಯಕ್ತಿ ಜವಾಬ್ದಾರಿಯುತವಾಗಿ ವಿಕಾಸವಾಗಲು ವೈಜ್ಞಾನಿಕ, ವೈಚಾರಿಕ ಶಿಕ್ಷಣ ದೊರೆಯಬೇಕೆಂದು ಸ್ಪಷ್ಟವಾಗಿ ಹೇಳುತ್ತದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ, ಮೌಢ್ಯ, ಕಂದಾಚಾರಗಳಿಂದ ಸಮಾಜ ಕೂಡಿದ್ದು, ಇವುಗಳನ್ನು ದೂರ ಮಾಡುವ ಶಿಕ್ಷಣ ಪಡೆಯುವುದು ಅತ್ಯಂತ ಅಗತ್ಯ ಎಂದು ಸಿದ್ದರಾಮಯ್ಯ ಪ್ರತಿಪಾದಿಸಿದರು.



ಅಸಮಾನತೆ ಹೋಗಲಾಡಿಸಬೇಕು: ಅಸಮಾನತೆಯಿಂದ ಕೂಡಿರುವ ಸಮಾಜದಲ್ಲಿ ಮುಖ್ಯವಾಹಿನಿಗೆ ಎಲ್ಲರೂ ಬರಬೇಕೆಂದರೆ ಸಮಾಜದಲ್ಲಿ ಬದಲಾವಣೆಯಾಗಬೇಕು ಎಂದ ಸಿದ್ದರಾಮಯ್ಯ, ಆರ್ಥಿಕ ಸಾಮಾಜಿಕ ಸ್ವಾತಂತ್ರ್ಯ ಎಲ್ಲರಿಗೂ ದೊರೆಯಬೇಕು. ವೈಚಾರಿಕತೆ ಮತ್ತು ವೈಜ್ಞಾನಿಕ ಶಿಕ್ಷಣ ಶಿಕ್ಷಕರಿಂದ ಮಾತ್ರ ನೀಡಲು ಸಾಧ್ಯ. ಸಾಮಾನ್ಯರನ್ನು ಅಸಾಮಾನ್ಯರನ್ನಾಗಿ ಮಾಡುವ ಶಕ್ತಿ ಇರುವುದು ಶಿಕ್ಷಕರಿಗೆ ಮಾತ್ರ ಎಂದರು.

ಬುದ್ಧಿ, ಕರುಣೆ ಮತ್ತು ಕೌಶಲ್ಯ ಮಿಳಿತವಾದಾಗ ಮಾತ್ರ ವಿಕಾಸ ಸಾಧ್ಯ ಎಂದು ಮಹಾತ್ಮ ಗಾಂಧಿ ಹೇಳಿದ್ದಾರೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರನ್ನು ಅತ್ಯಂತ ಹೆಚ್ಚು ಗೌರವಿಸುತ್ತೇನೆ. ನಾನು ಕೂಡ ಶಿಕ್ಷರ ಕಾರಣದಿಂದಲೇ ಮುಖ್ಯಮಂತ್ರಿಯ ಸ್ಥಾನದವರೆಗೆ ಬೆಳೆದಿರುವದು ಎಂದು ಸಿದ್ದರಾಮಯ್ಯ ಇದೇ ವೇಳೆ ಸ್ಮರಿಸಿದರು.

ಸುವಿಧಾನಬದ್ಧ ಕರ್ತವ್ಯವನ್ನು ನಿರ್ವಹಿಸಬೇಕು: ಶಿಕ್ಷಕರು ಸಂವಿಧಾನಬದ್ಧ ಕರ್ತವ್ಯವನ್ನು ನಿರ್ವಹಿಸಬೇಕು. ವಿಷಯಗಳನ್ನು ತರ್ಕ, ಪ್ರಶ್ನೆ ಮಾಡಿ ಒಪ್ಪಿಕೊಳ್ಳಬೇಕು. ಮಕ್ಕಳಿಗೂ ಅದನ್ನೇ ಕಲಿಸಬೇಕು ಎಂದು ಅವರು ಸಲಹೆ ನೀಡಿದರು.

ಬೇಡಿಕೆಗಳ ಈಡೇರಿಕೆಗೆ ಪ್ರಯತ್ನ: ಶಿಕ್ಷಕರ ಹಲವಾರು ಬೇಡಿಕೆಗಳನ್ನು ಹಂತ-ಹಂತವಾಗಿ ಈಡೇರಿಸಲಾಗುವುದು. ಹಿಂದೆ ಹಣಕಾಸು ಸಚಿವರಾಗಿದ್ದ ಸಂದರ್ಭದಲ್ಲಿ 5ವರ್ಷಗಳಲ್ಲಿ 1 ಲಕ್ಷ ಶಿಕ್ಷಕರನ್ನು ನೇಮಕ ಮಾಡಿದ್ದನ್ನು ಸ್ಮರಿಸಿದರು. ಆರು ಮತ್ತು 7ನೆ ವೇತನ ಆಯೋಗವನ್ನು ಜಾರಿ ಮಾಡಿದ್ದು, ಬೇಡಿಕೆಗಳನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು.

ಒಪಿಎಸ್ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚೆ ಮಾಡಿ ತೀರ್ಮಾನಕ್ಕೆ ಬರುತ್ತೇವೆ. ವೇತನ ಬಡ್ತಿ ನೀಡಲು ಪ್ರಯತ್ನ ಮಾಡಲಾಗುವುದು. ಶಿಕ್ಷಕ ನಡವಳಿಕೆ ಉತ್ತಮವಾಗಿರಬೇಕು. ಎಲ್ಲ ಮಕ್ಕಳಿಗೂ ವೈಚಾರಿಕತೆ, ವೈಜ್ಞಾನಿಕತೆಯುಳ್ಳ ಶಿಕ್ಷಣ ನೀಡಿದರೆ ಸುಭದ್ರ, ಸುಂದರ ಸಮಾಜ, ದೇಶವನ್ನು ಕಟ್ಟಬಹುದು. ಭವಿಷ್ಯ ರೂಪಿಸುವಂತಹ ಮಕ್ಕಳನ್ನು ತಯಾರು ಮಾಡಿ ಎಂದು ಅವರು ಕರೆ ನೀಡಿದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಸಚಿವ ಮಧು ಬಂಗಾರಪ್ಪ, ಮೇಲ್ಮನೆ ಸದಸ್ಯರಾದ ಪುಟ್ಟಣ್ಣ, ರಾಮೋಜಿ ಗೌಡ, ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ, ಬಸವರಾಜ ಗುರಿಕಾರ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಚಂದ್ರಶೇಖರ ನುಗ್ಗಲಿ ಸೇರಿದಂತೆ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮಾನ್ವಿ 11ನೇ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅದ್ದೂರಿ ಚಾಲನೆ



ಮಾನ್ವಿ,ಫೆ.28-

ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕದ ವತಿಯಿಂದ ನೀರಮಾನ್ವಿ ಗ್ರಾಮದಲ್ಲಿ ನಡೆದ 11ನೇ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಭವ್ಯ ಮೆರವಣಿಗೆಯ ಮೂಲಕ ಚಾಲನೆ ನೀಡಲಾಯಿತು.

ಗ್ರಾಮದ ಶ್ರೀ ರೇಣುಕಾ ಯಲ್ಲಮ್ಮದೇವಿ ದೇವಸ್ಥಾನ ಆವರಣದಿಂದ ನಾಡದೇವಿಯ ಭಾವಚಿತ್ರದೊಂದಿಗೆ ಸಮ್ಮೇಳನಾಧ್ಯಕ್ಷರಾದ ಸಾಹಿತಿ ಡಾ.ಬಸವಪ್ರಭು ಪಾಟೀಲ್ ಬೆಟ್ಟದೂರು ಅವರ ಮೆರವಣಿಗೆ ಆರಂಭವಾಯಿತು. ಶಾಸಕ ಜಿ.ಹಂಪಯ್ಯ ನಾಯಕ ಹಾಗೂ ಕಸಾಪ ಜಿಲ್ಲಾಧ್ಯಕ್ಷ ರಂಗಣ್ಣ ಪಾಟೀಲ್ ಅಳ್ಳುಂಡಿ ಕನ್ನಡ ಬಾವುಟ ತೋರಿಸಿ ಮೆರವಣಿಗೆಗೆ ಚಾಲನೆ ನೀಡಿದರು.

ಕಳಸಗಳೊಂದಿಗೆ ಸಂಭ್ರಮ :

ನೂರಾರು ಮಹಿಳೆಯರು ಕಳಸಗಳೊಂದಿಗೆ ಹಾಗೂ ವಿವಿಧ ವಾದ್ಯ ಮೇಳಗಳೊಂದಿಗೆ ಮೆರವಣಿಗೆಯಲ್ಲಿ ಭಾಗವಹಿಸಿದರು. ಮೆರವಣಿಗೆ ದೇವಸ್ಥಾನದಿಂದ ಸಾಗಿ ಅದ್ದೂರಿಯಾಗಿ ಶ್ರೀ ಸಿದ್ದರೂಢ ಮಠ ಆವರಣಕ್ಕೆ ತಲುಪಿತು.

ಇದಕ್ಕೂ ಮುನ್ನ ಬೆಳಿಗ್ಗೆ 7.30ಕ್ಕೆ ಶಾಸಕ ಜಿ. ಹಂಪಯ್ಯ ನಾಯಕ ಸಮ್ಮೇಳನದ ಮುಖ್ಯ ವೇದಿಕೆಯಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಿದರು. ನಾಡಧ್ವಜವನ್ನು ರಂಗಣ್ಣ ಪಾಟೀಲ್ ಅಳ್ಳುಂಡಿ ಹಾಗೂ ಪರಿಷತ್ ಧ್ವಜಾರೋಹಣವನ್ನು ತಾಲೂಕು ಅಧ್ಯಕ್ಷ ಶರಣಬಸವ ನೀರಮಾನ್ವಿ ನೆರವೇರಿಸಿದರು.

ಮೆರವಣಿಗೆ ಉದ್ದಕ್ಕೂ ಕನ್ನಡಾಭಿಮಾನಿಗಳು ನಾಡು-ನುಡಿಯ ಗೀತೆಗಳಿಗೆ ಹೆಜ್ಜೆ ಹಾಕಿ ಕುಣಿದು ಕನ್ನಡದ ಅಭಿಮಾನವನ್ನು ವ್ಯಕ್ತಪಡಿಸಿದರು.

ನಂತರ ನಡೆದ ವೇದಿಕೆಯ ಕಾರ್ಯಕ್ರಮದಲ್ಲಿ ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು, ಶಾಸಕ ಹಂಪಯ್ಯ ನಾಯಕ, ಮಾಜಿ ಶಾಸಕರಾದ ರಾಜಾ ವೆಂಕಟಪ್ಪ ನಾಯಕ, ಬ್ಯಾಗವಾಟ್ ಬಸನಗೌಡ, ಗಂಗಾಧರ ನಾಯಕ ಹಾಗೂ ಸಮ್ಮೇಳನ ಉದ್ಘಾಟಕರಾದ ಹೆಸರಾಂತ ಲೇಖಕ ಸಿದ್ದರಾಮ ಹೊನ್ಕಲ್ ಶಹಪುರು ಹಾಗೂ ಕಲ್ಮಠ ಶ್ರೀಗಳು, ಧರ್ಮಗುರುಗಳು ಸೇರಿದಂತೆ ಅಪಾರ ಸಂಖ್ಯೆಯ ಕನ್ನಡ ಅಭಿಮಾನಿಗಳು ಉಪಸ್ಥಿತರಿದ್ದರು.

ಡಿಗ್ರೀ ಕಾಲೇಜಿನಲ್ಲಿ ಕ.ಸಾ.ಪ ದಿಂದ ವಿಶೇಷ ಉಪನ್ಯಾಸ

ಸಕಾರಾತ್ಮಕ ಮನೋಭಾವನೆ ಯಶಸ್ಸಿನ ಮೊದಲ ಸೋಪಾನ - ಎ. ಟಿ ಪಾಟೀಲ್



ಸಿರವಾರ, ಫೆ.28-

ವಿದ್ಯಾರ್ಥಿಗಳು ಸಕಾರಾತ್ಮಕ ಮನೋಭಾವನೆಯನ್ನು ಬೆಳೆಸಿಕೊಂಡಾಗ ಮಾತ್ರ ಪರೀಕ್ಷೆಯಲ್ಲಿ ಯಶಸ್ಸು ಗಳಿಸಲು ಸಾಧ್ಯ. ಸಕಾರಾತ್ಮಕ ಮನೋಭಾವನೆ ಯಶಸ್ಸಿನ ಮೊದಲ ಸೋಪಾನವಾಗಿದೆ ಎಂದು ಎ. ಟಿ ಪಾಟೀಲ್ ದಿಕ್ಸೂಚಿ ಸಂಪಾದಕರು ಬೆಂಗಳೂರು, ಇವರು ಅಭಿಪ್ರಾಯಪಟ್ಟರು.

ಪಟ್ಟಣದ ಕ್ಕಾರಿ ಪ್ರಥಮ ದರ್ಜೆ ಕಾಲೇಜು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ರಾಯಚೂರು, ತಾಲೂಕ ಕನ್ನಡ ಸಾಹಿತ್ಯ ಪರಿಷತ್ ಸಿರವಾರ ಇವರ ಸಹಯೋಗದಲ್ಲಿ ಕಾಲೇಜಿನ ಆಂತರಿಕ ಗುಣಮಟ್ಟ ಭರವಸಾ ಕೋಶ, ಪ್ರೇರಣಾ ಕೋಶ ಹಾಗೂ ಕಾಲೇಜಿನ ಉದ್ಯೋಗ ಭರವಸಾ ಕೋಶದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಪದವಿ ವಿದ್ಯಾರ್ಥಿಗಳಿಗಾಗಿ ''ವರ್ತಮಾನ ಕಾಲದಲ್ಲಿ ಪರೀಕ್ಷೆಗಳ ತಯಾರಿ'' ಕುರಿತ ವಿಶೇಷ ಕಾರ್ಯಗಾರವನ್ನು ಉದ್ದೇಶಿಸಿ ಮಾತನಾಡಿಮನುಷ್ಯ ಜೀವನದಲ್ಲಿ ಬಹುಮುಖ್ಯ ಅಂಗ.ಅದರಲ್ಲೂ ವಿದ್ಯಾರ್ಥಿಗಳ ಜೀವನದಲ್ಲಿ ಸಾಧನೆ ಮಹತ್ತರ ಪಾತ್ರ ವಹಿಸುತ್ತದೆ.ಪ್ರತಿಯೊಂದು ಸಾಧನೆ ಹಿಂದೆ ಪರೀಕ್ಷೆ ಎಂಬ ಸವಾಲು ಮಾಮೂಲು ವರ್ತಮಾನ ಕಾಲದ ಈ ಸಂದರ್ಭದಲ್ಲಿ ಪರೀಕ್ಷೆ ಎದುರಿಸುವುದು ಬಹುಸುಲಭ ದಿನಕ್ಕೆ 6 ತಾಸು ಏಕಾಗ್ರತೆಯಿಂದ ಆಸಕ್ತಿದಾಯಕವಾಗಿ ಅಧ್ಯಯನ ಮಾಡಿದ್ದೇ ಆದರೆ ಯಶಸ್ಸು ಕಟ್ಟಿಟ್ಟ ಬುತ್ತಿ.ನಿರಂತರ ಅಭ್ಯಾಸ ಪರೀಕ್ಷೆ ಗಂಡಾಂತರ ಎದುರಿಸುವುದರಲ್ಲಿ ಎರಡು ಮಾತಿಲ್ಲ. ಭಯ ಬಿಡಿ

3ನೇಯ ಪುಟಕ್ಕೆ

ಪಿಯು ಪರೀಕ್ಷೆ :597 ಹಾಜರಿ - 28 ಗೈರು



ಸಿರವಾರ.ಫೆ.28

2026 ನೇ ಸಾಲಿನ ದ್ವಿತಿಯ ವರ್ಷದ ಪಿಯು ಸಿ ಪರೀಕ್ಷೆಯು ಇಂದಿನಿಂದ (ಶನಿವಾರ) ಪ್ರಾರಂಭವಾಗಿದ್ದೂ, ಮೊದಲ ದಿನ ಕನ್ನಡ ವಿಷಯ ಪರೀಕ್ಷೆಗೆ ಒಟ್ಟು ಎರಡು ಕೇಂದ್ರ ಸೇರಿ ಒಟ್ಟು 625 ವಿದ್ಯಾರ್ಥಿಗಳು ನೊಂದಣಿ ಮಾಡಿಸಿದರೆ, 28 ವಿದ್ಯಾರ್ಥಿಗಳು ಗೈರು, 597 ಹಾಜರಿಯಾಗಿ ಪರೀಕ್ಷೆ ಬರೆದರು. ಮೊದಲ ದಿನ ಶಾಂತಿಯುತವಾಗಿ ಪರೀಕ್ಷೆ ಜರುಗಿತು. ವಿವರ :- ಸರ್ಕಾರಿ ಪದವಿ ಪೂರ್ವ ಕಾಲೇಜು ಸಿರವಾರ ಕೇಂದ್ರದಲ್ಲಿ ಒಟ್ಟು ವಿದ್ಯಾರ್ಥಿಗಳು 311,ಹಾಜರಾದ ವಿದ್ಯಾರ್ಥಿಗಳು 285,ಗೈರು ಹಾಜರಾದ ವಿದ್ಯಾರ್ಥಿಗಳು 26, ಎಂದು ಪರೀಕ್ಷೆ ಮುಖ್ಯಾದಿಕ್ಷಕ ಹನುಮಂತ ಚನ್ನೂರು ತಿಳಿಸಿದರೆ, ಕೇಂದ್ರ ಸಂಖ್ಯೆ 2 ಅಮರೇಗೌಡ ಪಾಟೀಲ್ ಬಯ್ಯಾಪೂರು ಪದವಿ ಪೂರ್ವ ಕಾಲೇಜು ಒಟ್ಟು ವಿದ್ಯಾರ್ಥಿಗಳು 314,ಹಾಜರಾದ ವಿದ್ಯಾರ್ಥಿಗಳು 312, 2 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ.

ಮಾಹಿತಿ ಹಕ್ಕು ಉಲ್ಲಂಘನೆಗೆ ಕಠಿಣ ಕ್ರಮ-ಬಿ. ವೆಂಕಟ ಸಿಂಗ್ ಕಠಿಣ ಕ್ರಮ

ರಾಯಚೂರು, ಫೆ.28-

ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಕೇಳಲಾದ ಮಾಹಿತಿಯನ್ನು ಸಕಾಲದಲ್ಲಿ ನೀಡದೆ ನಿರ್ಲಕ್ಷ್ಯ ತೋರಿದ ಗ್ರಾಮ ಪಂಚಾಯತ್ ಅಧಿಕಾರಿಗಳ ವಿರುದ್ಧ ಕರ್ನಾಟಕ ಮಾಹಿತಿ ಆಯೋಗದ ಕಲಬುರಗಿ ಪೀಠ ಕಠಿಣ ಕ್ರಮ ಕೈಗೊಂಡಿದೆ. ರಾಜ್ಯ ಮಾಹಿತಿ ಆಯುಕ್ತರಾದ ಬಿ. ವೆಂಕಟ ಸಿಂಗ್ ಅವರು ಒಟ್ಟು ಐದು ಪ್ರಕರಣಗಳಲ್ಲಿ ?50 ಸಾವಿರ ದಂಡ ವಿಧಿಸಿ ಆದೇಶಿಸಿದ್ದಾರೆ.

ಮೇಲ್ಮನವಿದಾರರು ಸಲ್ಲಿಸಿದ ಮಾಹಿತಿ ಹಕ್ಕು ಅರ್ಜಿಗೆ ನಿಗದಿತ ಅವಧಿಯಲ್ಲಿ ಸ್ಪಷ್ಟ ಮಾಹಿತಿ ನೀಡದ ಹಿನ್ನೆಲೆಯಲ್ಲಿ ಅವರು ಆಯೋಗದ ಮೆಟ್ಟಿಲೇರಿದ್ದರು.



ಪ್ರಕರಣದ ದ್ವಿತೀಯ ಮೇಲ್ಮನವಿಯನ್ನು ವಿಚಾರಿಸಿದ ಕಲಬುರಗಿ ಪೀಠವು, ಮಾಹಿತಿ ನೀಡುವಂತೆ ಸಂಬಂಧಿತ ಅಧಿಕಾರಿಗಳಿಗೆ ನಿರ್ದೇಶನ ನೀಡಿತ್ತು. ಅಲ್ಲದೇ, ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 18(3) ಹಾಗೂ 20(1)ರಡಿ ದಂಡ ವಿಧಿಸುವ ಎಚ್ಚರಿಕೆಯನ್ನೂ ನೀಡಲಾಗಿತ್ತು.

ಆದೇಶ ಪಾಲನೆ ಮಾಡದ ಹಿನ್ನೆಲೆಯಲ್ಲಿ ವಡಗೇರಾ ತಾಲ್ಲೂಕಿನ ತಡಬಿಡಿ ಗ್ರಾಮ ಪಂಚಾಯತ್ ಕಾರ್ಯದರ್ಶಿ ಯಂಕನಗೌಡ, ಗುಂಡಗುರ್ತಿ ಗ್ರಾಮ ಪಂಚಾಯತ್ ಕಾರ್ಯದರ್ಶಿ ಮಲ್ಲಿಕಾರ್ಜುನ ನಾಯಕ್, ಯಾದಗಿರಿ ತಾಲ್ಲೂಕಿನ ಸೈದಾಪೂರ ಗ್ರಾಮ ಪಂಚಾಯತ್ ಕಾರ್ಯದರ್ಶಿ ಇಸ್ಮಾಯಿಲ್ ಹಾಗೂ ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ತಾಡರು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶಿವಕುಮಾರ್ ದೊಡ್ಡಮನಿ ಅವರಿಗೆ ತಲಾ 10,000 ದಂಡ ವಿಧಿಸಲಾಗಿದೆ.

ಇದಲ್ಲದೆ, ಸೈದಾಪೂರ ಗ್ರಾಮ ಪಂಚಾಯತ್ ಕಾರ್ಯದರ್ಶಿ ಇಸ್ಮಾಯಿಲ್ ವಿರುದ್ಧದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ತಲಾ 10,000ರಂತೆ ಒಟ್ಟು 20,000 ದಂಡ ವಿಧಿಸಲಾಗಿದೆ. ತಡಬಿಡಿ ಗ್ರಾಮ ಪಂಚಾಯತ್ ಕಾರ್ಯದರ್ಶಿ ಯಂಕನಗೌಡ ಅವರು ಮೇಲ್ಮನವಿದಾರಿಗೆ ಮಾಹಿತಿ ನೀಡಲು ಮಾಡಿದ ವಿಳಂಬಕ್ಕಾಗಿ 3,000 ಪರಿಹಾರ ನೀಡುವಂತೆ ಆದೇಶಿಸಲಾಗಿದೆ.

ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಸಾರ್ವಜನಿಕ ಅಧಿಕಾರಿಗಳು ಅರ್ಜಿದಾರರಿಗೆ ನಿಗದಿತ ಅವಧಿಯಲ್ಲಿ ಮಾಹಿತಿ ನೀಡುವುದು ಕಡ್ಡಾಯ. ವಿಳಂಬ ಹಾಗೂ ನಿರ್ಲಕ್ಷ್ಯ ತೋರಿದರೆ ಕಾನೂನು ಕ್ರಮ ತಪ್ಪದು ಎಂಬುದನ್ನು ಆಯೋಗದ ಈ ಆದೇಶ ಸ್ಪಷ್ಟಪಡಿಸಿದೆ.

ಶ್ರೀಶೈಲ ಮಲ್ಲಿಕಾರ್ಜುನ ಮಾಲೆ ಧರಿಸಿದ ಭಕ್ತರು



ಸಿರವಾರ, ಫೆ.28-

ಪಟ್ಟಣದ ಈಶ್ವರ ದೇವಸ್ಥಾನದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಸಹ ಶ್ರೀಶೈಲ ಭಕ್ತಾದಿಗಳು ಮಾಲೆ ಧರಿಸಿದರು, ಪುರಾತನ ಕಾಲದಿಂದಲೂ ಪಟ್ಟಣದ ಈಶ್ವರ ದೇವಸ್ಥಾನದಲ್ಲಿ ಪ್ರತಿವರ್ಷದಂತೆ ಈ ವರ್ಷವೂ 505 ಭಕ್ತಾದಿಗಳು ಮಾಲೆ ದರ್ಶಿಸಿ ದೇವರು ಕೃಪೆಗೆ ಪಾತ್ರರಾದರು.

ಶ್ರೀಶೈಲ ಮಲ್ಲಿಕಾರ್ಜುನನ ಮಾಲಾಧಾರಿಗಳು ಪ್ರತಿ ದಿನ ಬೆಳಗ್ಗೆ ಮತ್ತು ಸಂಜೆ ಪೂಜೆ ಮಾಡುತ್ತಾರೆ. ಮಾಲಾಧಾರಿಗಳನ್ನು ಪ್ರತಿದಿನ ತಮ್ಮ ಮನೆಗೆ ಕರೆಸಿ ಪೂಜೆ ಕಾರ್ಯಕ್ರಮ ಪ್ರಸಾದ ವ್ಯವಸ್ಥೆ ಮಾಡುತ್ತಾರೆ ಮಾಲಧಾರಿಗಳು 50 ದಿವಸದ ನಂತರ ಶ್ರೀಶೈಲಕ್ಕೆ ತೆರಳಿ ತಮ್ಮ ಪೂಜಾ ಕಾರ್ಯ ಕ್ರಮಗಳು ನೆರವೇರಿಸುವುದು ವಾಡಿಕೆ ಎಂದು ತಿಳಿದು ಬಂದಿದೆ. ಪೂಜಾ ಕಾರ್ಯಕ್ರಮದ ಗುರುಗಳು ಶ್ರೀ ನಿಂಬಯ್ಯ ಸ್ವಾಮಿ ದೇವೇಂದ್ರಪ್ಪ ಸ್ವಾಮಿಗಳು ಮಾಲಾಧಾರಿಗಳು ಉಪಸ್ಥಿತರಿದ್ದರು

ದ್ವಿತೀಯ ಪಿಯುಸಿ ಪರೀಕ್ಷೆ ಆರಂಭ: ವಿದ್ಯಾರ್ಥಿಗಳಿಗೆ ಶುಭ ಹಾರೈಕೆ ತಿಳಿಸಿದ ತಿಪ್ಪರಾಜ ಹವಾಲ್ದಾರ್





ರಾಯಚೂರು, ಫೆ.28-

ರಾಜ್ಯಾದ್ಯಂತ ದ್ವಿತೀಯ ಪಿಯುಸಿ ಪರೀಕ್ಷೆಗಳು ಆರಂಭವಾದ ಹಿನ್ನೆಲೆಯಲ್ಲಿ ಮಾಜಿ ಶಾಸಕರು ಹಾಗೂ ಮೂಲತಃ ಶಿಕ್ಷಕರೂ ಆದ ತಿಪ್ಪರಾಜ ಹವಾಲ್ದಾರ್ ಅವರು ವಿದ್ಯಾರ್ಥಿಗಳಿಗೆ ಶುಭಾಶಯ ಕೋರಿದರು.

ನಗರದ ಸ್ಟೇಷನ್ ಸಮೀಪದಲ್ಲಿರುವ ಸರ್ಕಾರಿ ಬಾಲಕಿಯ ಪದವಿ ಪೂರ್ವ ಕಾಲೇಜಿಗೆ ಭೇಟಿ ನೀಡಿದ ಅವರು, ಪರೀಕ್ಷೆಗೆ ಹಾಜರಾಗುತ್ತಿದ್ದ ವಿದ್ಯಾರ್ಥಿವಿದ್ಯಾರ್ಥಿನಿಯರನ್ನು ಪ್ರೋತ್ಸಾಹಿಸಿ ಆತ್ಮಸ್ಥೈರ್ಯ ತುಂಬಿದರು. ಧೈರ್ಯ ಮತ್ತು ಆತ್ಮವಿಶ್ವಾಸದಿಂದ ಪರೀಕ್ಷೆಯನ್ನು ಎದುರಿಸಿ ಉತ್ತಮ ಫಲಿತಾಂಶ ಗಳಿಸಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಪೆನ್ನು ಹಾಗೂ ಗುಲಾಬಿ ಹೂಗುಚ್ಛ ನೀಡಿ ಶುಭ ಹಾರೈಸಿದ ಅವರು, ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾಗಿ ಪೋಷಕರು ಮತ್ತು ಕಾಲೇಜಿನ ಕೀರ್ತಿಯನ್ನು ಹೆಚ್ಚಿಸಬೇಕೆಂದು ಆಶಿಸಿದರು.

ಕಾರ್ಯಕ್ರಮದಲ್ಲಿ ವೆಂಕಟೇಶ್ ದಿನ್ನಿ (ವಕೀಲರು), ಮಹಾಂತೇಶ್ ಮುಕ್ತಿ, ಒಡೆಯರಾಜ, ಶಾಂತು ಸಿಂಗಮ್, ನವೀನ್ ಕುರ್ಡಿ ಸೇರಿ ದಂತೆ ಹಲವರು ಉಪಸ್ಥಿತರಿದ್ದರು.

ಸಿಪಿಐ (ಎಂಎಲ್) ಲಿಬರೇಶನ್ ಪ್ರಥಮ ರಾಯಚೂರು ತಾಲೂಕು ಸಮ್ಮೇಳನ: ಜನವಿರೋಧಿ ನೀತಿಗಳ ವಿರುದ್ಧ ಒಗ್ಗಟ್ಟಿನ ಹೋರಾಟಕ್ಕೆ ಕರೆ



ರಾಯಚೂರು, ಫೆ.28-

ಸಮಾಜದಲ್ಲಿ ಧರ್ಮ ಹಾಗೂ ಜಾತಿ ಆಧಾರಿತ ವಿಭಜನೆ ಹೆಚ್ಚಿಸುವ ರಾಜಕೀಯ ಧೋರಣೆಗಳನ್ನು ಜನತೆ ಎಚ್ಚರಿಕೆಯಿಂದ ಗುರುತಿಸಬೇಕು. ಸಂವಿಧಾನ ಮೌಲ್ಯಗಳನ್ನು ಕಾಪಾಡುವ ದಿಸೆಯಲ್ಲಿ ಜನವಿರೋಧಿ ನೀತಿಗಳ ವಿರುದ್ಧ ಸಂಘಟಿತ ಹೋರಾಟ ಅಗತ್ಯವಾಗಿದೆ ಎಂದು ಸಿಪಿಐ (ಎಂಎಲ್) ಲಿಬರೇಶನ್ ಜಿಲ್ಲಾ ಕಾರ್ಯದರ್ಶಿ ನಾಗರಾಜ ಪೂಜಾರ್ ಹೇಳಿದರು.

ನಗರದ ಶಿವ ಶರಣ ಮಾದಾರ ಚನ್ನಯ್ಯ ಸಭಾಂಗಣದಲ್ಲಿ ಶನಿವಾರ ನಡೆದ ಪಕ್ಷದ ಪ್ರಥಮ ತಾಲೂಕು ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು. ದಿನನಿತ್ಯದ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಸಾಮಾನ್ಯ ಜನರ ಬದುಕು ಸಂಕಷ್ಟಕ್ಕೀಡಾಗಿದೆ. ಕಾರ್ಮಿಕ ಕಾನೂನುಗಳಲ್ಲಿ ಬದಲಾವಣೆ ಮಾಡಿ ಕೆಲಸದ ಅವಧಿ ಹೆಚ್ಚಿಸಲಾಗಿದ್ದು, ಕಡಿಮೆ ವೇತನದಲ್ಲಿ ದುಡಿಸುವ ಪರಿಸ್ಥಿತಿ ಉಂಟಾಗಿದೆ ಎಂದು ಅವರು ಆರೋಪಿಸಿದರು. ರೈತರಿಗೆ ನೀಡುತ್ತಿದ್ದ ಸಬ್ಸಿಡಿಗಳ ಕಡಿತ ಕೃಷಿ ವಲಯಕ್ಕೆ ಹಾನಿಕಾರಕವಾಗಿದೆ ಎಂದರು.

ದಲಿತರು, ಹಿಂದುಳಿದ ವರ್ಗಗಳು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿರುವುದು ಆತಂಕಕಾರಿ ಬೆಳವಣಿಗೆ. ಜನಜೀವನದ ಮೂಲಭೂತ ಸಮಸ್ಯೆಗಳಾದ ಉದ್ಯೋಗ, ಶಿಕ್ಷಣ, ಆರೋಗ್ಯ,

3ನೇಯ ಪುಟಕ್ಕೆ

ಧಾರ್ಮಿಕ ಭಾವನೆಗಳಿಗೆ ಧಕ್ಕೆ ಬರದಂತೆ ಎಚ್ಚರಿಕೆಯಿಂದ ಹೋಳಿ ಆಚರಿಸಿ: ಡಾ.ಸುರೇಶ ಬಿ. ಇಟ್ನಾಳ



ಕೊಪ್ಪಳ ಫೆ.27

ಮಾ. 2, 3, 4 ರಂದು ಜಿಲ್ಲೆಯಾದ್ಯಂತ ಆಚರಿಸುವ ಹೋಳಿ ಹಬ್ಬದಲ್ಲಿ ಇನ್ನೊಬ್ಬರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟಾಗದಂತೆ ಎಚ್ಚರ ವಹಿಸಿ ಹೋಳಿ ಹಬ್ಬವನ್ನು ಆಚರಿಸಿ ಎಂದು ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ ಅವರು ಹೇಳಿದರು.

ಶುಕ್ರವಾರದಂದು ಜಿಲ್ಲೆಯಲ್ಲಿ ಮಾರ್ಚ್ 2, 3, 4 ರಂದು ಆಚರಿಸುವ ಹೋಳಿ ಹಬ್ಬದ ಕುರಿತಾಗಿ ವಿವಿಧ ಧರ್ಮಗಳ ಮುಖಂಡರು, ಸಾರ್ವಜನಿಕರು ಹಾಗೂ ಅಧಿಕಾ ರಿಗಳೊಂದಿಗೆ ಹಮ್ಮಿಕೊಂಡಿದ್ದ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹಬ್ಬಗಳು ಸಂಭ್ರಮವನ್ನು ಹೆಚ್ಚಿಸುವ ಹಾಗೂ ಹಂಚುವ ಉದ್ದೇಶವನ್ನು ಹೊಂದಿದ್ದು, ನಮ್ಮ ಆಚರಣೆಯಿಂದ ಇನ್ನೊಬ್ಬರಿಗೆ ತೊಂದರೆ, ನೋವುಂಟಾಗಬಾರದು. ಜಿಲ್ಲೆಯಲ್ಲಿ ವಿವಿಧ ತಾಲ್ಲೂಕುಗಳಲ್ಲಿ ಮಾರ್ಚ್ 2, 3 ಹಾಗೂ 4 ರಂದು ಹೋಳಿ ಆಚರಣೆ ಮಾಡಲಾಗುತ್ತದೆ. ಈ ಸಂದರ್ಭ ಮಹಿಳೆಯರು ಹಾಗೂ ಮಕ್ಕಳ ಮೇಲೆ ಒತ್ತಾಯಪೂರ್ವಕ ಬಣ್ಣ ಎರಚಬಾರದು. ಹಾನಿಕಾರಕ ರಾಸಾಯನಿಕವುಳ್ಳ ಬಣ್ಣಗಳ ಬಳಕೆ ಮಾಡಬಾರದು. ಅಲ್ಲದೇ ಫೆ.28 ರಿಂದ ದ್ವಿತೀಯ ಪಿಯುಸಿ ಪರೀಕ್ಷೆಗಳು ಆರಂಭಗೊಳ್ಳಲಿದ್ದು, ಪರೀಕ್ಷಾ ಕೇಂದ್ರದ ಸುತ್ತ 200 ಮೀಟರ್ ಅಂತರದಲ್ಲಿ ಯಾವುದೇ ಗಲಾಟೆ, ಹೋಳಿ ಆಚರಣೆ ಮಾಡ ಬಾರದು. ವಿದ್ಯಾರ್ಥಿಗಳಿಗೆ ತೊಂದರೆ ಉಂಟಾಗಬಾರದು. ಬೇರೆ ಊರುಗಳಿಂದ ಬರುವ ಬಸ್‌ಗಳನ್ನು ತಡೆದು ಒತ್ತಾಯಪೂರ್ವಕ ಬಣ್ಣ ಎರಚಬಾರದು. ಸಾಮಾಜಿಕ ಮಾಧ್ಯಮಗಳಲ್ಲಿ ದ್ವೇಷ ಭಾವನೆ ಬಿತ್ತುವ ಯಾವುದೇ ಪೋಸ್ಟ್ ಮಾಡಬಾರದು. ಜಿಲ್ಲೆಯಾದ್ಯಂತ ಆಯಾ ಪ್ರದೇಶಕ್ಕನುಗುಣವಾಗಿ ಮಾ.2, 3 ಮತ್ತು 4 ರಂದು ಮದ್ಯ ಮಾರಾಟ ನಿಷೇಧಿಸಲಾಗಿದೆ. ಆದಾಗ್ಯೂ ಅಬಕಾರಿ ಇಲಾಖೆಯವರು ನಿರಂತರ ನಿಗಾ ವಹಿಸಿ ಅಕ್ರಮ ಮದ್ಯ ಮಾರಾಟ ಕಂಡುಬಂದಲ್ಲಿ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಶಾಂತಿಯುತ ಹಬ್ಬ ಆಚರಣೆಗೆ ಎಲ್ಲ ಸಾರ್ವಜನಿಕರು, ಧರ್ಮದವರು ಸಹಕರಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಹೋಳಿ ನಂತರ ಸ್ನಾನಕ್ಕೆಂದು ಟಿ.ಬಿ.ಡ್ಯಾಂ ಹಾಗೂ ಸಾಣಾಪುರ ಕೆರೆಗೆ ಜನ ಹೋಗುವುದರಿಂದ ಈ ಸ್ಥಳಗಳಲ್ಲಿ ಅಗ್ನಿಶಾಮಕದಳ, ಎಸ್‌ಡಿಆರ್‌ಎಫ್ ತಂಡ ಹಾಗೂ ನುರಿತ ಈಜುಗಾರರನ್ನು ನಿಯೋಜಿಸಬೇಕು.

ಯುವಕರು ಆವೇಷದಲ್ಲಿ ಅನಗತ್ಯ ಗಲಾಟೆ ಮಾಡಿಕೊಳ್ಳುವ ಸಂಭವವಿರುತ್ತದೆ. ಆದ್ದರಿಂದ ಹಿರಿಯರು ಈ ಬಗ್ಗೆ ಸೂಕ್ತ ತಿಳುವಳಿಕೆ ನೀಡಿ, ಶಾಂತಿಯುತವಾಗಿ ಹಬ್ಬ ಆಚರಿಸಲು ಸೂಚಿಸಬೇಕು ಎಂದು ಅವರು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್.ಅರಸಿದ್ದಿ ಮಾತ ನಾಡಿ, ಹೋಳಿ ಹಬ್ಬದ ನೆಪದಲ್ಲಿ ಸಾರ್ವಜನಿಕರಿಗೆ, ಮಹಿಳೆಯರಿಗೆ ತೊಂದರೆ ಉಂಟಾಗಬಾರದು, ಮಸೀದಿಗಳಿಗೆ ಬಣ್ಣ ಎರಚಬಾರದು. ಹೋಳಿ ಹಿನ್ನೆಲೆ ಜಿಲ್ಲೆಯಾದ್ಯಂತ ಪೊಲೀಸ್ ಗಸ್ತು ಹೆಚ್ಚಿಸಲಾಗಿದೆ. ಟಿ.ಬಿ.ಡ್ಯಾಂ, ಸಾಣಾಪುರ ಕೆರೆಯ ಸುತ್ತ ಹಿಚ್ಚಿನ ನಿಗಾ ಇಡಲಾಗಿದೆ. ಯುವಕರ ಮಧ್ಯೆ ಗಲಾಟೆಗಳಾದಾಗ ಅಥವಾ ಏನೇ ತೊಂದರೆ ಉಂಟಾ ದಾಗ ಸಾರ್ವಜನಿಕರು 112, ಪೊಲೀಸ್ ಕಂಟ್ರೋಲ್ ರೂಂ ಗೆ ಕರೆ ಮಾಡಿ ಮಾಹಿತಿ ನೀಡಬೇಕು. ಕುಡಿದು ವಾಹನ ಚಾಲನೆ ಮಾಡ ದಂತೆ ಎಚ್ಚರಿಕೆ ವಹಿಸಿ ಎಂದು ಅವರು ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಕೊಪ್ಪಳ ಡಿವೈಎಸ್‌ಪಿ ಮುತ್ತಣ್ಣ ಸವರಗೋಳ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಂಜುನಾಥ ಗುಂಡೂರ, ಅಬಕಾರಿ ಡಿವೈಎಸ್‌ಪಿ ಆಂಜನೇಯ, ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಎಲ್ಲ ತಾಲ್ಲೂಕುಗಳ ತಹಶೀಲ್ದಾರರು, ಪೊಲೀಸ್ ಅಧಿಕಾರಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

ಈ ಭಾರಿ ಉತ್ತಮ ಮಳೆ ಶ್ರೀ ಮಳೆರಾಜೇಂದ್ರಸ್ವಾಮಿ ಮಠದ ವಾಣಿ

ಬಾಗಲಕೋಟೆ ,ಫೆ.28-

ಪ್ರಸಕ್ತ ವರ್ಷ ಮುಂಗಾರು ಮಳೆಗಳಾದ ರೋಹಿಣಿ. ಆರಿದ್ರಾ, ಪುನರ್ವಸು, ಹಿಂಗಾರು ಮಳೆಗಳಲ್ಲಿ ಮಗಿ, ಹುಬ್ಬಿ, ಉತ್ತರಿ ಮಳೆಗಳು ಸಂಪೂರ್ಣ ಸುರಿಯಲಿವೆ ಎಂಬುವುದು ಮುರನಾಳ ಶ್ರೀ ಮಳೆ ರಾಜೇಂದ್ರಸ್ವಾಮಿ ಮಠದ ವಾಣಿಯಾಗಿದೆ.

ಈ ಭಾಗದ ಕೃಷಿಕರ ಮಠವೆಂದು ಖ್ಯಾತಿ ಪಡೆದಿರುವ ಮುರನಾಳ ಶ್ರೀ ಮಳೆರಾಜೇಂದ್ರಸ್ವಾಮಿ ಮಠದ ಜಾತ್ರಾ ಮಹೋತ್ಸವದ ಅಂಗವಾಗಿ ಗುರುವಾರ ರಾತ್ರಿ ನಡೆದ ಕಡುಬಿನ ಕಾಳಗ (ಮಳೆ ಬೆಳೆ ಸೂಚನೆ) ದಲ್ಲಿ ಈ ಸೂಚನೆ ದೊರೆತಿದೆ.

ಈ ವರ್ಷದ ಮುಂಗಾರಿನಲ್ಲಿ ರೋಹಿಣಿ ಉತ್ತಮ. ಆರಿದ್ರಾ ಸಂಪೂರ್ಣ, ಪುನರ್ವಷು, ಪುಷ್ಯಾ ಸಾಧಾರಣ ವಾಗಿ ಬಿಳಲಿವೆ.

ಹಿಂಗಾರಿನಲ್ಲಿ ಮಗಿ ಉತ್ತಮ, ಉತ್ತರಿ ಸಂಪೂರ್ಣ್, ಹುಬ್ಬಿ, ಚಿತ್ತಿ ಸ್ವಾತಿ ಸಾಧಾರಣವಾಗಿ ಮಳೆಗಳು ಸುರಿಯಲಿವೆ ಎಂಬುದಾಗಿ ಶ್ರೀ ಮಠದ ಸೂಚನೆ ದೊರೆಯಿತು. ಎಂದು ಶ್ರೀ ಮಠದ ಮಠಾಧೀಶರಾದ ಗುರುಲಿಂಗಸ್ವಾಮಿಗಳು ಮಹಾಪುರುಷ ಅವರು ನೆರೆದ ಭಕ್ತಾಧಿಗಳಿಗೆ ತಿಳಿಸಿದರು.

ಪ್ರತಿವರ್ಷದಂತೆ ಹೊಸ ಮುರನಾಳದಲ್ಲಿ ಶ್ರೀ ಮಳೆರಾಜೇಂದ್ರಸ್ವಾಮಿ ಮಠದ ಜಾತ್ರಾ ಮಹೋತ್ಸವ



ವಿಜೃಮಣೆಯಿಂದ ನಡೆದಿದ್ದು, ಜಾತ್ರೆಯ ಅಂಗವಾಗಿ ನಡೆಯುವ ಕಡುಬಿನ ಕಾಳಗಮಳೆ ಬೆಳೆ ಸೂಚನೆ ಈ ವರ್ಷವು ಮಳೆ ಚೆನ್ನಾಗಿ ಆಗಲಿ ಎಂದು ಪ್ರಾರ್ಥಿಸುತ್ತ ಸುತ್ತಮುತ್ತಲಿನ ಗ್ರಾಮಗಳ ರೈತಾಪಿ ಜನರು ಮಳೆ ಸೂಚನೆಗಾಗಿ ಕತೂಹಲದಿಂದ ಕಾಯ್ದು ನಿಂತಿದ್ದರು. ಮಳೆ-ಬೆಳೆ ಕುರಿತಂತೆ ಮಠದ ಸೂಚನೆ ಪಡೆದ ರೈತರು ಪ್ರಸಕ್ತ ವರ್ಷದ ಸಾಧಕ - ಬಾಧಕಗಳ ಬಗ್ಗೆ ತಮ್ಮ ತಮ್ಮಲಿಯೆ ವಿಚಾರ ವಿನಿಮಯ ಮಾಡಿಕೊಂಡರು.

ಕಡುಬಿನ ಕಾಳಗದ ಮುಂಚೆ ನಡೆದ ಮಳೆರಾಜೇಂದ್ರಸ್ವಾಮಿಗಳ ಮೂರ್ತಿ ಹೊತ್ತ ಪಲ್ಲಕ್ಕಿ ಮೆರವಣಿಗೆಯಲ್ಲಿ ಗ್ರಾಮದ ಸಾವಿರರು ಮಹಿಳೆಯರು ಆರತಿ ಹಾಗೂ ಪಂಚಬಿಂದಿಗೆಯೊಂದಿಗೆ ಪಾಲ್ಗೊಂಡಿದ್ದರು.

ಗಂಗೆಯ ಪೂಜೆಗಾಗಿ ನಿರ್ಮಿಸಿರುವ ಹೊಂಡದ ವರೆಗೆ ಮೆರವಣಿಗೆಯಲ್ಲಿ ಸಾಗಿದ ಗ್ರಾಮಸ್ಥರು ಗಂಗೆಗೆ ಪೂಜೆ ಸಲ್ಲಿಸಿದ ಬಳಿಕ ಪಂಚ ಬಿಂದಿಗೆಗಳಲ್ಲಿ ಗಂಗೆಯನ್ನು ತುಂಬಿ, ಮಳೆಸ್ವಾಮಿಗೆ ಜಲಾಭಿಷೇಕ, ಪಂಚಾಮೃತ ಅಭಿಷಕೆ ನೆರವೆರಿಸಿ, ಮುತ್ತೈದೆಯರಿಗೆ ಊಡಿ ತುಂಬಿದ ನಂತರ ಪಂಚ ಬಿಂದಿಗೆಗಳಿಗೆ ಪೂಜೆ ಸಲ್ಲಿಸಿ ಮಹಾಮಂಗಳಾರುತಿ ನಂತರ, ಹೀಗೆ ತುಂಬಲ್ಪಟ್ಟ ಪ್ರತಿ ಬಿಂದಿಯ ಮೇಲೆ ಎರಡೆರಡು ಮಳೆಗಳು ಹೆಸರನ್ನು ನಮೂದಿಸಲಾಗುತ್ತದೆ. ಪಂಚ ಬಿಂದಿಗೆ ಹೊತ್ತು ನಂತರ ಗಂಗಾ ಹೊಂಡದಿಂದ ಪುನ : ಮೆರವಣಿಗೆಯಲ್ಲಿ ರಥೋತ್ಸವ ಇರುವಸ್ಥಳಕ್ಕೆ ಬರುತ್ತಾರೆ.

ರ'ಥ'ೋ'ತ್'ಸ'ವ'ವ'ನ'್ನ ಪ್ರದಕ್ಷಣೆಹಾಕಿ ಪಂಚಬಿಂದಿಗೆ ಪೂಜೆ ಸಲ್ಲಿಸಿ ತರುವಾಯ ಮಳೆ-ಬೆಳೆ ಸೂಚನೆ ನೀಡಲಾಗುತ್ತದೆ. ಮಳೆಗಳ ಹೆಸರನ್ನು ಹೊಂದಿರುವ ಬಿಂದಿಗೆಗಳ ಬಸಿಯುವಿಕೆ (ಸೋರಿಕೆ) ಆಧಾರದ ಮೇಲೆ ಮಳೆ, ಬೆಳೆ ಸೂಚನೆ ಹೊರಬೀಳುತ್ತದೆ. ಸೋರಿಕೆ ಪ್ರಮಾಣದ ಮೇಲೆಯೇ ಯಾವ ಮಳೆ ಹೆಚ್ಚು ಸುರಿಯುತ್ತದೆ ಹಾಗೂ ಯಾವುದು ಕಡಿಮೆಯಾಗುತ್ತದೆ ಎಂಬುದನ್ನು ಹೇಳಲಾಗುತ್ತದೆ. ವಿಶಿಷ್ಟ ಪರಂಪರೆ ಹ'ೊ'ಂ'ದ'ಿ'ರ'ು'ವ'ುದ'ರಿಂ'ದ' ಮಳೆರಾಜೇಂದ್ರ ಮಠದ ಕಡುಬಿನ ಕಾಳಗಕ್ಕೆ ರೈತ ಸಮುದಾಯ ಕುತೂಹಲದಿಂದ ನೋಡುತ್ತದೆ.

ಗುರುವಾರ ರಾತ್ರಿ ಸಂಭ್ರಮದಿಂದ ನಡೆದ ಕಡುಬಿನ ಕಾಳಗದಲ್ಲಿ ಮಠಾಧೀಶರಾದ ಗುರಲಿಂಗಸ್ವಾಮಿಗಳು ಹಾಗೂ ನವೀನಸ್ವಾಮಿಗಳು ಮಹಾಪುರುಷ ಸಾನಿಧ್ಯವಹಿಸಿದ್ದರು, ಇದೇ ಸಂದರ್ಭದಲ್ಲಿ ಹರಕೆಯ ಇಡೆರಿಕಾಗಿ ಸಂಕಲ್ಪ ಮಾಡಿದ ಮಾತಾ ಭಗೀನಿಯರಿಗೆ ಊಡಿ ತುಂಬುವ ಕಾರ್ಯ ಜರುಗಿತು, ಜಾತ್ರೆಯ ಭಾಬೂಧಾರರಿಗೆ ಶ್ರೀಗಳು ಶಾಲು ನೀಡಿ ಗೌರವಿಸಿ ಸನ್ಮಾನಿಸಿದರು. ಗ್ರಾಮದ ಹಿರಿಯರು, ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದರು.

ಇಂದಿನಿಂದ ದ್ವಿತೀಯ ಪಿಯುಸಿ ಪರೀಕ್ಷೆ ಜಿಲ್ಲಾಧಿಕಾರಿಗಳಿಂದ ಶುಭ ಹಾರೈಕೆ

ಪಿಯುಸಿ ವಿದ್ಯಾರ್ಥಿಗಳಲ್ಲಿ ಆತ್ಮಸ್ಥೈಯ ತುಂಬಿದ ಡಿಸಿ



ಬಾಗಲಕೋಟೆ, ಫೆ.27-

ಜಿಲ್ಲೆಯಾದ್ಯಂತ ಫೆಬ್ರವರಿ 28 ರಿಂದ ಆರಂಭವಾಗಲಿರುವ ಪಿಯುಸಿ ವಾರ್ಷಿಕ ಪರೀಕ್ಷೆಗಳ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿ ಸಂಗಪ್ಪ ಅವರು ನಗರದ ವಿವಿಧ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಸತಿ ನಿಲಯಗಳಿಗೆ ಶುಕ್ರವಾರ ಭೇಟಿ ನೀಡಿ ವಿದ್ಯಾರ್ಥಿಗಳಲ್ಲಿ ಆತ್ಮಸ್ಥೈರ್ಯ ತುಂಬುವ ಮೂಲಕ ಶುಭ ಹಾರೈಸಿದರು.

ನವನಗರದ ಅಲ್ಪಸಂಖ್ಯಾತರ ಎಂಡಿಆರ್‌ಎಸ್ ಮತ್ತು ಎಪಿಜೆ ಅಬ್ದುಲ್ ಕಲಾಂ ಪದವಿ ಪೂರ್ವ ಕಾಲೇಜ ಮತ್ತು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯಕ್ಕೆ ಭೇಟಿ ನೀಡಿ ವಿದ್ಯಾರ್ಥಿಗಳ ಜೊತೆಗೆ ಆತ್ಮೀಯವಾಗಿ ಮಾತನಾಡಿದ ಜಿಲ್ಲಾಧಿಕಾರಿಗಳು ಪರೀಕ್ಷೆ ಜೀವನದ ಒಂದು ಭಾಗ ಮಾತ್ರ. ಯಾವುದೇ ಆತಂಕವಿಲ್ಲದೇ ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಲು ತಿಳಿಸಿದರು.

ವಿದ್ಯಾರ್ಥಿಗಳ ಮೇಲೆ ಒತ್ತಡ ಹೇರುವದಕ್ಕಿಂತ ಧೈರ್ಯ ತುಂಬುವುದು ಮುಖ್ಯವಾಗಿದೆ. ವಿದ್ಯಾರ್ಥಿಗಳು ಕಾಟಾಚಾರಕ್ಕೆ ಓದದೇ ಇಷ್ಟಪಟ್ಟು ಅಬ್ಯಾಸ ಮಾಡಬೇಕು. ನಿಮ್ಮ ಈಗಿನ ಶ್ರಮ ಮುಂದಿನ ಗುರಿ ಸಾಧನೆಗೆ ಅ'ನ'ು'ಕ'ೂ'ಲ'ವ'ಾ'ಗ'ಲಿ'ದ'. ಉತ್ತಮವಾದ ಗುರಿಯನ್ನು ಇಟ್ಟುಕೊಂಡು ಅದಕ್ಕೆ ತಕ್ಕಂತೆ ಶ್ರಮ ಕೂಡಾ ಅಂದರೆ ಅಬ್ಯಾಸ ಇರಬೇಕು. ಧೈರ್ಯ, ಶಿಸ್ತು ಹಾಗೂ ಸಮಯ ಪಾಲನೆ ಇವೇ ಯಶಸ್ಸಿನ ಮಂತ್ರಗಳಾಗಿದೆ ಎಂದು ತಿಳಿಸಿದ ಪರೀಕ್ಷೆ ಬರೆಯಲು ಹೊರಟಿರುವ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಪರೀಕ್ಷೆಗಳು ಸುಗಮವಾಗಿ ಹಾಗೂ ಶಾಂತಿಯುತವಾಗಿ ನಡೆಯಲು ಜಿಲ್ಲಾಡಳಿತದಿಂದ ಎಲ್ಲ ಅಗತ್ಯ ಕ್ರಮುಗಳನ್ನು ಕೈಗೊಳ್ಳಲಾಗಿದೆ. ಜಿಲ್ಲೆಯಲ್ಲಿ ರೆಗ್ಯೂಲರ್ 24353, ಪುನರಾವರ್ತಿತ 1753 ಹಾಗೂ ಬಾಹ್ಯ 903 ಸೇರಿ ಒಟ್ಟು 27009 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಕಲಾ ವಿಭಾಗದಲ್ಲಿ 8992, ವಾಣಿಜ್ಯ ವಿಭಾಗದಲ್ಲಿ 5171 ಹಾಗೂ ವಿಜ್ಞಾನ ವಿಭಾಗದಲ್ಲಿ 10190 ವಿದ್ಯಾರ್ಥಿಗಳು ಇದ್ದಾರೆ. ಒಟ್ಟು 39 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿವೆ ಎಂದು ತಿಳಿಸಿದರು.

ಪರೀಕ್ಷಾ ಕೇಂದ್ರದ ಎಲ್ಲ ಕೊಠಡಿಗಳಿಗೆ ಸಿಸಿಟಿವಿ ಅ'ಳ'ವ'ಡಿ'ಸ'ಲ'ಾ'ಗಿ'ದ'. ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ವೆಬ್‌ಕಾಸ್ಟಿಂಗ್ ವ್ಯವಸ್ಥೆ ಮಾಡಲಾಗಿದೆ. ಇದಕ್ಕಾಗಿ 8 ಜನರ ತಂಡವನ್ನು ಪರೀಕ್ಷಾ ಕಾರ್ಯ ಚಟುವಟಿಕೆಗಳಿಗೆ ನೇಮಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ಪ್ರದೇಶದಲ್ಲಿ ಸೆಕ್ಷನ್ 163 ಜಾರಿಯಲ್ಲಿದ್ದು, ಈಗಾಗಲೇ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ ಝುರಾಕ್ಸ ಅಂಗಡಿಗಳನ್ನು ಮುಚ್ಚಲು ಸೂಚನೆ ನೀಡಲಾಗಿದೆ. ಪರೀಕ್ಷೆಗೆ 39 ಮುಖ್ಯ ಅಧೀಕ್ಷಕರು, ಸಹ ಮುಖ್ಯ ಅಧೀಕ್ಷಕರು ಮತ್ತು ಜಾಗೃತದ ದಳದ ಸದಸ್ಯರನ್ನು ನೇಮಿಸಲಾಗಿದೆ ಎಂದು ತಿಳಿಸಿದರು.

ಭೇಟಿ ಸಮಯದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಪುಂಡಲೀಕ ಕಾಂಬಳೆ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಜಿ.ಮನ್ನಿಕೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಶಿವಾನಂದ ಪಟ್ಟಣಶೆಟ್ಟಿ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಪಂಕಜ ಸೇರಿದಂತೆ ಇತರೆ ಅಧಿಕಾರಿಗಳು ಇದ್ದರು.

ಪಶು ಸಂಗೋಪನೆ ಗ್ರಾಮೀಣ ಆರ್ಥಿಕತೆಯ ಬೆನ್ನೆಲುಬು- ಥಾವರಚಂದ್ ಗೆಹ್ಲೋಟ್

ಬೀದರ, ಫೆ.28-

ಗ್ರಾಮೀಣ ಭಾರತವು ಸಂಪೂರ್ಣ ಕೃಷಿ ಆಧಾರಿತವಾಗಿದ್ದು, ಪಶು ಸಂಗೋಪನೆಯೇ ಗ್ರಾಮೀಣ ಆರ್ಥಿಕ ಅಭಿವೃದ್ಧಿಗೆ ಬೆನ್ನೆಲುಬು ಆಗಿದೆಯೆಂದು ರಾಜ್ಯಪಾಲರಾದ ಥಾವರಚಂದ್ ಗೆಹ್ಲೋಟ್ ಅವರು ತಿಳಿಸಿದರು.

ಅವರು ಇಂದು ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರನ 15ನೇ ಘಟಿಕೋತ್ಸವ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ವಿದ್ಯಾರ್ಥಿಗಳಿಗೆ ಪದಕ, ಪದವಿ ಪ್ರಧಾನ ಮಾಡಿ ಮಾತನಾಡಿದರು.

ಕೃಷಿ ಉತ್ಪಾದನೆ, ಹಾಲು ಉತ್ಪಾದನೆ, ಡೈರಿ ಉತ್ಪಾದನೆಗಳು ಮೀನು ಉತ್ಪಾದನೆ ರೈತರ ಆರ್ಥಿಕ ಅಭಿವೃದ್ಧಿಗೆ ಕಾರಣವಾಗಿವೆ. ಭಾರತವು ಹಾಲು ಹಾಗೂ ಮೀನು ಉತ್ಪಾದನೆಯಲ್ಲಿ ಮುಂಚೂಣಿ ಸ್ಥಾನದಲ್ಲಿದೆ. ವಿಶ್ವವಿದ್ಯಾಲಯದ ವಿಜ್ಞಾನಿಗಳು ಮಾನವ, ಪ್ರಾಣಿ ಮತ್ತು ಪರಿಸರವನ್ನು ಒಳಗೊಂಡಂತೆ ಸಮಗ್ರ ದೃಷ್ಠಿಕೋನದಲ್ಲಿ ಒಂದು ಆರೋಗ್ಯ ದೃಷ್ಠಿಕೋನದಲ್ಲಿ ಕಾರ್ಯನಿರ್ವಹಿಸಬೇಕೆಂದರು.

ಆಧುನಿಕ ವಿಜ್ಞಾನ, ತಂತ್ರಜ್ಞಾನ ಮೂಲಿಕ ಕೃಷಿ, ಕೃಷಿಯೇತರ, ಪಶು ಸಂಗೋಪನೆ ಉತ್ಪಾದನೆಯನ್ನು ಹೆಚ್ಚಿಸುವ, ವೃದ್ಧಿಸುವ ಕಾರ್ಯ ಆಗಬೇಕು. ವಿವಿಧ ರೀತಿಯ ರೋಗಗಳ ನಿಯಂತ್ರಣವು ಸಹ



ದೊಡ್ಡ ಸವಾಲಾಗಿದ್ದು, ವಿಜ್ಞಾನಿಗಳು ಸತತ ಸಂಶೋಧನೆಯಲ್ಲಿ ತೊಡಗಿಸಿಕೊಂಡಿದ್ದಾರೆ ಎಂದರು.

ವಿಜ್ಞಾನಿಗಳು ಯಶಸ್ಸು , ಪರಿಶ್ರಮ ಹಾಗೂ ಸೇವಾಭಾವನೆಯಿಂದ ಜೀವನ ನಡೆಸಬೇಕು. ಜ್ಞಾನ ನೈತಿಕ ಮೌಲ್ಯಗಳ ಆಚರಣೆ ಜೊತೆ ದೇಶ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು. ಪಶುಗಳ ಬಗ್ಗೆ ಕರುಣೆಯಿಂದ ರೈತರಿಗೆ ಸೇವೆ ನೀಡುವಂತಾಗಲಿ ಹಾಗೂ ಪರಿಸರ ಸಂರಕ್ಷಣೆಯಲ್ಲಿ ತೊಡಗಿಸಿಕೊಳ್ಳಬೇಕೆಂದು ಹಿತ ನುಡಿಗಳನ್ನು ಆಡಿದರು.

ಪಶು ಸಂಗೋಪನೆ ಸಚಿವರಾದ ಕೆ.ವೆಂಕಟೇಶ ಅವರು ಮಾತನಾಡಿ, ರಾಜ್ಯದಲ್ಲಿ 2.9 ಕೋಟಿ ಜಾನುವಾರುಗಳಿವೆ. ಹಾಲು ಉತ್ಪಾದನೆಯಲ್ಲಿ ರಾಜ್ಯ 2ನೇ ಸ್ಥಾನದಲ್ಲಿದೆ. ಕಳೆದ ವರ್ಷ ಪ್ರತಿದಿನ 1 ಕೋಟಿ ಲೀಟರ ಹಾಲು ಉತ್ಪಾದನೆಯಾಗುತ್ತದೆ ಎಂದರು.

ಗ್ರಾಮೀಣ ಜನರ ಆರ್ಥಿಕತೆಯಲ್ಲಿ ಪಶು ಸಂಗೋಪನೆ ಅತೀ ಮಹತ್ವದ ಪಾತ್ರ ವಹಿಸುತ್ತಿದೆ. ಸರಕಾರವು ವಿವಿಧ ಯೋಜನೆಗಳ ಮೂಲಕ ಪಶು ಸಂಗೋಪನೆಯನ್ನು ಬಲಪಡಿಸುತ್ತಿದೆಯೆಂದರು. ನುರಿತ ತಜ್ಞರು, ವಿಜ್ಞಾನಿಗಳು ಪಶು ಸಂಗೋಪನೆ ಉತ್ಪಾದನೆ ಹೆಚ್ಚಿಸುವಲ್ಲಿ ತೊಡಗಿಸಿಕೊಂಡಿದ್ದಾರೆ. ಅನುಗ್ರಹ ಯೋಜನೆಯಡಿ ಜಾನುವಾರು ಸಾವಿಗೆ ಪರಿಹಾರ ನೀಡಲಾಗುತ್ತಿದೆ. ಮಹಿಳೆಯರಿಗೆ, ಸ್ತ್ರೀ ಶಕ್ತಿ ಗುಂಪುಗಳಿಗೆ ಜಾನುವಾರುಗಳನ್ನು ವಿತರಿಸಲಾಗುತ್ತಿದೆಯೆಂದರು. ಘಟಿಕೋತ್ಸವ ಕಾರ್ಯಕ್ರಮವನ್ನು ಇನ್ನು ಮುಂದೆ ಕನ್ನಡದಲ್ಲೇ ಮಾಡುವಂತೆ ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ಇಕ್ರಿಸ್ಯಾಟ್ ಸಂಸ್ಥೆಯ ಮಹಾನಿರ್ದೇಶಕರಾದ ಹಿಮಾಂಶು ಪಾಠಕ್ ಅವರು ಕರ್ನಾಟಕ ರಾಜ್ಯದ ಅಭಿವೃದ್ಧಿಯನ್ನು ಹೊಗಳಿದರು. ಕರ್ನಾಟಕ ರಾಜ್ಯವು ಕೃಷಿ ಹಾಗೂ ಶಿಕ್ಷಣ ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿದೆ. ದೇಶದ ವಿವಿಧೆಡೆ ರಾಜ್ಯದ ವಿಜ್ಞಾನಿಗಳಿದ್ದಾರೆ ಎಂದರು. 2025 ರಲ್ಲಿ ದೇಶವು 217 ಮಿಲಿಯನ್ ಲೀಟರ ಹಾಲು ಉತ್ಪಾದನೆಯಾಗುತ್ತಿದೆ. ದೇಶವು ಕೃಷಿಯಲ್ಲಿ ಸಾಕಷ್ಟು ಅಭಿವೃದ್ಧಿ ಹೊಂದುತ್ತಿದೆ. ಪಶುಪಾಲನೆ ಹಾಗೂ ಮೀನುಗಾರಿಕೆ ಮಹತ್ತರ ಪಾತ್ರ ವಹಿಸುತ್ತಿವೆ. ಆಧುನಿಕ ವಿಜ್ಞಾನ ತಂತ್ರಜ್ಞಾನದಿಂದ ಅನೇಕ ನ್ಯೂನ್ಯತೆಗಳನ್ನು ಬಗೆಹರಿಸಲಾಗುತ್ತಿದೆ. ಸವಾಲುಗಳು ಸಾಕಷ್ಟಿವೆ. ವಿದ್ಯಾರ್ಥಿಗಳು ಶಿಕ್ಷಣದ ಮಹತ್ವವನ್ನು ಅರಿಯಬೇಕು. ಶಾಂತಿ, ನೆಮ್ಮದಿ, ಆರ್ಥಿಕ ಅಭಿವೃದ್ಧಿಗೆ ಶಿಕ್ಷಣವೇ ಅಗತ್ಯ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯಗಳು ಮಹತ್ತರ ಪಾತ್ರ ವಹಿಸುತ್ತದೆ ಎಂದರು.

ಬೀದರನ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕೆ.ಸಿ.ವೀರಣ್ಣ ಅವರು ಪ್ರಾಸ್ತಾವಿಕ ಭಾಷಣ ಮಾಡಿದರು. ಘಟಿಕೋತ್ಸವದಲ್ಲಿ 34 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರಧಾನ ಮಾಡಲಾಯಿತು. ಉಡುಪಿ ಮೂಲದ ವಿದ್ಯಾರ್ಥಿನಿ ಖುಷಿ ಮೆಂಡನ್ 16 ಚಿನ್ನದ ಪದಕಗಳನ್ನು ಪಡೆದರು.

ಈ ಸಮಾರಂಭದಲ್ಲಿ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಡಾ.ಗಿರೀಶ ಬದೋಲೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ, ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರನ ಕುಲ ಸಚಿವರಾದ ಪಿ.ಟಿ.ರಮೇಶ ಸೇರಿದಂತೆ ಗಣ್ಯ ಮಾನ್ಯರು ಪಾಲ್ಗೊಂಡಿದ್ದರು.

ಮಹಿಳೆ ಮೇಲೆ ಸರಕಾರಿ ಶಾಲೆಯ ಶಿಕ್ಷಕನಿಂದ ಅತ್ಯಾಚಾರ ಪ್ರಕರಣ

ಜೀವಾವಧಿ ಶಿಕ್ಷೆ, ಸಂತ್ರಸ್ಥೆಗೆ 5 ಲಕ್ಷ.50 ಸಾವಿರ ರು ಪರಿಹಾರ

ಗಂಗಾವತಿ, ಫೆ.28-

ಮಹಿಳೆ ಮೇಲೆ ಅತ್ಯಾಚಾರ ಸೇರಿದಂತೆ ವಿವಿಧ ಪ್ರಕರಣಗಳಲ್ಲಿದ್ದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಗೆ ಇಲ್ಲಿಯ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಲಯ ಜೀವಿತಾವಧಿ ಶಿಕ್ಷೆ ಜೊತೆಗೆ 6 ಲಕ್ಷರು ದಂಡ ವಿಧಿಸಿದೆ.

2022 ರಲ್ಲಿ ಕಾರಟಗಿಯ ಮಹಿಳೆ ಮೇಲೆ ಸಿಂದನೂರು ತಾಲೂಕಿನ ಸಿಂಗಾಪುರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕನಾಗಿದ್ದ ಕಾರಟಗಿ ಜೆಪಿ ನಗರದ ಮೊಹಮ್ಮದ್ ಅಜರೂದ್ದೀನ್ ಎನ್ನುವರು ಅತ್ಯಾಚಾರ, ಮಹಿಳೆ ಮೇಲೆ ಹಲ್ಲೆ, ಅವ್ಯಾಶ್ಚ ಶಬ್ದಗಳಿಂದ ನಿಂದನೆ, ಜೀವ ಬೆದರಿಕೆ ಜೊತೆಗೆ ಅತ್ಯಾಚಾರ ಮಾಡುತ್ತಿರುವ ಕುರಿತು ವೈರಲ್ ಮಾಡಿದ್ದರು. ಅಲ್ಲದೆ ಸಂತ್ರಸ್ಥೆಯ ಅಂಗವಿಕಲ ಮಗಳಿಗೆ ಮನೆ ಪಾಠ ಮತ್ತು ಹೆಚ್ಚಿನ ಶಿಕ್ಷಣ ,ಸರಕಾರದ ಯೋಜನೆಗಳನ್ನು ಕೊಡಿಸುವದಾಗಿ ನಂಬಿಸಿ ಆಕೆಯ. ಮೇಲೆ ಅತ್ಯಾಚಾರ ಮಾಡಿದ್ದ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂತ್ರಸ್ಥೆ ಶಿಕ್ಷಕ ಮೊಹಮ್ಮದ್ ಅಜರೂದ್ದೀನ್ ವಿರುದ್ಧ ಕಾರಟಗಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಈ ಪ್ರಕರಣಕ್ಕೆ ವಿಚಾರಣೆ ನಡೆಸಿದ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯದೀಶರಾದ ಸದಾನಂದ ನಾಗಪ್ಪ ನಾಯಕ ಅವರು ಶುಕ್ರವಾರ ತೀರ್ಪು ನೀಡಿ ಜೀವಿತಾವಧಿ ಶಿಕ್ಷೆ ಮತ್ತು ಸಂತ್ರಸ್ಥೆಗೆ 5 ಲಕ್ಷ 50 ಸಾವಿರ ರು ಪರಿಹಾರ ಮತ್ತು 5 0 ಸಾವಿರ ರು ರಾಜ್ಯಕ್ಕೆ ತುಂಬ ಬೇಕೆಂದು ಆದೇಶಿಸಿದ್ದಾರೆ. ಸರಕಾರಿ ಅಭಿಯೋಜಕಿ ನಾಗಲಕ್ಷ್ಮೀ ಎಸ್ ವಾದ ಮಂಡಿಸಿದಿದರು.

ವಿಎಸ್‌ಕೆ ವಿವಿ: ಪ್ರಸಾರಾಂಗದ ಪಠ್ಯಪುಸ್ತಕಗಳ ಲೋಕಾರ್ಪಣೆ

ಪಠ್ಯಪುಸ್ತಕಗಳು ಶೈಕ್ಷಣಿಕ ವ್ಯವಸ್ಥೆಯಲ್ಲಿ ಮುಖ್ಯ ಪಾತ್ರ ವಹಿಸುತ್ತವೆ: ಪ್ರೊ.ಎಂ.ಮುನಿರಾಜು

ಬಳ್ಳಾರಿ,ಫೆ.28-

ಪಠ್ಯಪುಸ್ತಕಗಳು ವೈವಿಧ್ಯಮಯ ಜೀವನದ ಅನುಭವಗಳ ಜೊತೆಗೆ ವಿವಿಧ ಜ್ಞಾನಶಿಸ್ತುಗಳ ಕೈಪಿಡಿಗಳಾಗಿದ್ದು, ಶೈಕ್ಷಣಿಕ ವ್ಯವಸ್ಥೆಯ ಉದ್ದೇಶಗಳನ್ನು ಸಾಧಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ ಎಂದು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ.ಮುನಿರಾಜು ಅಭಿಪ್ರಾಯಪಟ್ಟರು.

ನಗರದ ಬಳ್ಳಾರಿ ಬಿಜಿನೆಸ್ ಕಾಲೇಜು ಸಭಾಂಗಣದಲ್ಲಿ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಪ್ರಸಾರಾಂಗ ಹಾಗೂ ಕಾಲೇಜಿನ ಕನ್ನಡ ವಿಭಾಗದ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಆಯೋಜಿಸಿದ್ದ ಸ್ನಾತಕ ಪದವಿಯ ನಾಲ್ಕನೇ ಸೆಮಿಸ್ಟರ್‌ನ ಕಲಾ ಸೌರಭ-3, ವಾಣಿಜ್ಯ ಸೌರಭ-3, ವಿಜ್ಞಾನ ಸೌರಭ-3 ಕನ್ನಡ ಭಾಷಾ ಪಠ್ಯಪುಸ್ತಕಗಳ ಲೋಕಾರ್ಪಣೆ ಹಾಗೂ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಪಠ್ಯಪುಸ್ತಕಗಳನ್ನು ಉತ್ತಮವಾಗಿ ರಚಿಸಿ ವಿದ್ಯಾರ್ಥಿಗಳಲ್ಲಿ ಔದ್ಯೋಗಿಕ ಭರವಸೆಯನ್ನು ಬೆಳೆಸುವ, ಆತ್ಮವಿಶ್ವಾಸವನ್ನು ತುಂಬುವ ಮಹತ್ವದ ಕಾರ್ಯವನ್ನು ಪ್ರಸಾರಾಂಗ ಮಾಡುತ್ತಿದೆ ಎಂದು ಹೇಳಿದರು.

ಪಠ್ಯಪುಸ್ತಕಗಳು ಹೊಸ ಹೊಸ ಜ್ಞಾನ ವಿಚಾರಗಳನ್ನು ತಿಳಿಸುವ ಮಹತ್ವದ ಸಾಧನಗಳಾಗಿದ್ದು, ಈ ಮೂಲಕ ವಿದ್ಯಾರ್ಥಿಗಳ ದೈನಂದಿನ ಜೀವನದ ಭಾಗಗಳಾಗಿ ಕಾರ್ಯನಿರ್ವಹಿಸಲು ವಿಶ್ವವಿದ್ಯಾಲಯವು ಮಹತ್ವದ ಕಾರ್ಯವನ್ನು ಮಾಡುತ್ತಿದೆ ಎಂದು ತಿಳಿಸಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯ ಪ್ರೊ.ಸಿ.ಬಿ. ಚಿಲ್ಕರಾಗಿ ಅವರು ಮಾತನಾಡಿ, ವಿಶ್ವವಿದ್ಯಾಲಯವು ಪ್ರಕಟಿಸಿದ ಪಠ್ಯಪುಸ್ತಕಗಳು ಪ್ರಾಚೀನ



ಮತ್ತು ಆಧುನಿಕ ಕವಿಗಳ ಸಂಗಮವಾಗಿದ್ದು, ವೈವಿಧ್ಯಮಯ ಜ್ಞಾನವನ್ನು ನೀಡುವ ಕಣಜಗಳಾಗಿವೆ, ಹೊಸ ಹೊಸ ಆಲೋಚನೆಗಳನ್ನು ಬೆಳೆಸಲು ಸಹಕಾರಿಯಾಗಿವೆ ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ.ರಾಮಚಂದ್ರ ಅವರು ಮಾತನಾಡಿ ಈ ವರ್ಷ ಪಠ್ಯಪುಸ್ತಕಗಳು ವಿದ್ಯಾರ್ಥಿಗಳಿಗೆ ಬಹುಬೇಗ ದೊರೆತಿದ್ದು, ವಿದ್ಯಾರ್ಥಿಗಳು ಅಧ್ಯಯನ ಮಾಡುವುದರ ಮೂಲಕ ಉತ್ತಮ ಅಂಕಗಳನ್ನು ಗಳಿಸಬೇಕು ಎಂದು ಕರೆ ನೀಡಿದರು.

ಪ್ರಸಾರಾಂಗದ ನಿರ್ದೇಶಕ ಡಾ.ತಿಪ್ಪೇರುದ್ರ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಪ್ರಸಾರಾಂಗವು ವಿಶ್ವವಿದ್ಯಾಲಯದ ಹೃದಯವಾಗಿದ್ದು, ವಿದ್ಯಾರ್ಥಿಗಳ, ಜನಸಾಮಾನ್ಯರ ನಡುವಿನ ಸೇತುವೆಯಂತೆ ಕಾರ್ಯನಿರ್ವಹಿಸಿ ಜ್ಞಾನ ಪ್ರಸರಣೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಲಾಸೌರಭ-3, ವಾಣಿಜ್ಯ ಸೌರಭ-3, ವಿಜ್ಞಾನ ಸೌರಭ-3 ಪಠ್ಯಪುಸ್ತಕಗಳನ್ನು ಸಂಪಾದಿಸಿದ ಡಾ.ಎ.ಎಂ.ರಾಜಶೇಖರಯ್ಯ, ಪ್ರೊ.ನಾಗಣ್ಣ ಕಿಲಾರಿ, ಡಾ.ಮಲ್ಲಿಕಾರ್ಜುನ ಎಂ. ಇವರನ್ನು ಸನ್ಮಾನಿಸಲಾಯಿತು.

ಕಾಲೇಜಿನ ಕನ್ನಡ ಅಧ್ಯಾಪಕರಾದ ಸರ್ವಮಂಗಳ, ಮಂಜುಳ ಕಾರ್ಯಕ್ರಮವನ್ನು ನಿರೂಪಿಸಿದರು. ವಿಶ್ವವಿದ್ಯಾಲಯದ ವ್ಯಾಪ್ತಿಯ ಕಾಲೇಜಿನ ಅಧ್ಯಾಪಕರು ಸೇರಿದಂತೆ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಒಂದನೇಯ ಪುಟದಿಂದ

ಡಿಗ್ರೀ ಕಾಲೇಜಿನಲ್ಲಿ ಕ.ಸಾ.ಪ ದಿಂದ ವಿಶೇಷ ಉಪನ್ಯಾಸ
ಸಕಾರಾತ್ಮಕ ಮನೋಭಾವನೆ ಯಶಸ್ಸಿನ ಮೊದಲ ಸೋಪಾನ -ಎ. ಟಿ ಪಾಟೀಲ್

ಅಭ್ಯಾಸ ಮಾಡಿ ಫಲಿತಾಂಶ ನೋಡಿ ಎಂದರು. ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ಆಗಮಿಸಿದ್ದ ಚುಕ್ಕಿ ಸೂಗಪ್ಪ ಸಾಹುಕಾರ್ ಗೌರವಾಧ್ಯಕ್ಷರು, ಕಸಾಪ ಸಿರವಾರ, ಇವರು ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಮುಂದೆ ಬರಲು ನಿರಂತರವಾಗಿ ಪ್ರಯತ್ನಿಸುತ್ತಿರಬೇಕು ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ, ಹಾಜಿ ಚೌದ್ರಿ, ಅಧ್ಯಕ್ಷರು, ಪಟ್ಟಣ ಪಂಚಾಯತ್ ಸಿರವಾರ ಇವರು ಮಾತನಾಡಿ ವಿದ್ಯಾರ್ಥಿಗಳು ಇಂತಹ ಕಾರ್ಯಕ್ರಮದ ಸದುಪಯೋಗಪಡಿಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ನಂತರ ಡಾ. ಹನುಮಂತ ಕೋರಾಪುರ್ ಪ್ರಾಚಾರ್ಯರು ಸರಕಾರಿ ಪ್ರಥಮ ದರ್ಜೆ ಕಾಲೇಜು ಸಿರವಾರ, ಇವರು ಮಾತನಾಡಿ ವಿದ್ಯಾರ್ಥಿಗಳು ಪದವಿ ಹಂತದಿಂದಲೇ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಯನ್ನು ಆರಂಭಿಸುವುದರ ಮೂಲಕ ಉಜ್ವಲ ಭವಿಷ್ಯಕ್ಕೆ ಮುನ್ನುಡಿ ಬರೆಯಬಹುದು ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸಿರವಾರ ಘಟಕದ ಅಧ್ಯಕ್ಷರಾದ ಮೌನೇಶ್ ಹಿರೇಹಣಗಿ, ಮಾಜಿ ಅದ್ಯಕ್ಷ ಭೂಪನಗೌಡ, ಸದಸ್ಯರು, ನಾಗಪ್ಪ ಪತ್ತಾರ್ ಕೋಶ್ಯಾಧ್ಯಕ್ಷರು ಕಸಾಪ , ಅಮರೇಶ್ ದಿನ್ನಿ ಸಂ.ಕಾ ಕಸಾಪ ಸಿರವಾರ, ವೆಂಕಟರೆಡ್ಡಿ ಬುಲ್ಕಲ್ ಗೌರವ ಕಾರ್ಯದರ್ಶಿ ಕಸಾಪ, ಕಾ.ಪ.ಸಂ ಅದ್ಯಕ್ಷ ಹನುಮೇಶ, ಕಾಲೇಜಿನ ಖಕಿಂಆ ಸಂಯೋಜಕರಾದ, ವಿನಯ್ ಶಂಕರ್ ವಿ, ಕಾಲೇಜಿನ ಪ್ರೇರಣಾ ಕೋಶದ ಸಂಯೋಜಕರಾದ ಸುಭಾನ್ ಸಾಬ್ ಎಸ್, ಕಾಲೇಜಿನ ಉದ್ಯೋಗ ಭರವಸಾ ಕೋಶದ ಸಂಯೋಜಕರಾದ ಮುತ್ತಪ್ಪ, ಸಹಾಯಕ ಪ್ರಾಧ್ಯಾಪಕರಾದ ಲಕ್ಷ್ಮಣ್ ಯಾದವ್, ರಾಜಶೇಖರ್, ಪದ್ಮಾವತಿ ಹಾಗೂ ಉಪನ್ಯಾಸಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸಿಪಿಐ (ಎಂಎಲ್) ಲಿಬರೇಶನ್ ಪ್ರಥಮ ರಾಯಚೂರು ತಾಲೂಕು ಸಮ್ಮೇಳನ:
ಜನವಿರೋಧಿ ನೀತಿಗಳ ವಿರುದ್ಧ ಒಗ್ಗಟ್ಟಿನ ಹೋರಾಟಕ್ಕೆ ಕರೆ

ನೀರು ಮತ್ತು ಬರಗಾಲದ ಪ್ರಶ್ನೆಗಳು ಪಾರ್ಶ್ವದಲ್ಲೇ ಉಳಿದಿವೆ ಎಂದು ಅವರು ಹೇಳಿದರು.

ಪಕ್ಷದ ಮುಖಂಡ ಅಜೀಜ್ ಜಾಗೀದಾರ್ ಮಾತನಾಡಿ, ಬರಗಾಲ, ನೀರಿನ ಕೊರತೆ ಹಾಗೂ ರೈತರ ಆತ್ಮಹತ್ಯೆ ಮೊದಲಾದ ಗಂಭೀರ ಸಮಸ್ಯೆಗಳಿಗೆ ಪರಿಣಾಮಕಾರಿ ಪರಿಹಾರ ಕಂಡುಹಿಡಿಯುವಲ್ಲಿ ಸರ್ಕಾರಗಳು ವಿಫಲವಾಗಿವೆ ಎಂದು ಟೀಕಿಸಿದರು. ಸಾರ್ವಜನಿಕ ಸಂಪತ್ತಿನ ಖಾಸಗೀಕರಣದ ನೀತಿಗಳು ಸಾಮಾನ್ಯ ಜನತೆಗೆ ಹಾನಿಕಾರಕವಾಗಿವೆ ಎಂದು ಹೇಳಿದರು. ಸಮ್ಮೇಳನದಲ್ಲಿ 11 ಸದಸ್ಯರ ನೂತನ ತಾಲೂಕು ಸಮಿತಿ ರಚಿಸಲಾಯಿತು. ಅಜೀಜ್ ಜಾಗೀದಾರ್ ಅವರನ್ನು ತಾಲೂಕು ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಬಸವರಾಜ ಬೇಳಗುರ್ಕಿ, ಆರ್.ಎಚ್. ಕಲಮಂಗಿ, ಮಹ್ಮದ್ ಹನೀಫ್, ಜಿಲಾನಿ ಯರಗೇರಾ, ಜಗದೀಶ್, ನೀಶಾರ್, ಪ್ರಹ್ಲಾದ್, ಮಹೇಂದ್ರ, ಮಹೇಶ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಶಾಂತಿ ಹಾಗೂ ಸೌಹಾರ್ದಯುತವಾಗಿ ಹೋಳಿ ಹಬ್ಬ ಆಚರಿಸಿ ಜಿಲ್ಲಾಧಿಕಾರಿ ಶ್ರೀ ಹರ್ಷಲ್ ಭೋಯರ್



ಯಾದಗಿರಿ, ಫೆ.27-

ಜಿಲ್ಲೆಯಾದ್ಯಂತ ಇದೇ ಮಾರ್ಚ್ 3 ಹಾಗೂ 4 ರಂದು ಹೋಳಿ ಹಬ್ಬವನ್ನು ಶಾಂತಿ ಹಾಗೂ ಸೌಹಾರ್ದಯುತವಾಗಿ ಆಚರಿಸುವಂತೆ ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ಅವರು ಸರ್ವಧರ್ಮಿಯರಿಗೆ ಕರೆ ನೀಡಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು ಹೋಳಿ ಹಬ್ಬ ಆಚರಣೆ ಕುರಿತು ನಡೆದ ಶಾಂತಿ ಪಾಲನಾ ಸಮಿತಿ ಸಭೆಯ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು.

ಜಿಲ್ಲೆಯಾದ್ಯಂತ ಇದೇ ಫೆಬ್ರವರಿ 3 ರಂದು ಕಾಮದಹನ ಹಾಗೂ ಫೆಬ್ರವರಿ 4 ರಂದು ಬಣ್ಣ ಆಡಲಾಗುತ್ತಿದೆ. ಹಿಂದೂ, ಮುಸ್ಲಿಂ ಸೇರಿದಂತೆ ಸರ್ವಧರ್ಮಿಯರು ಪರಸ್ಪರ ಶಾಂತಿ ಹಾಗೂ ಸೌಹಾರ್ದ ಯುತವಾಗಿ ಈ ಹಬ್ಬ ಆಚರಿಸುವಂತೆ ಅವರು ತಿಳಿಸಿದರು.

ಜಿಲ್ಲೆಯಲ್ಲಿ ಈ ಹಿಂದಿನಿಂದಲೂ ಎಲ್ಲರೂ ಪ್ರೀತಿ, ವಿಶ್ವಾಸ ಹಾಗೂ ಸೌಹಾರ್ದ ಯುತವಾಗಿ ವಿವಿಧ ಹಬ್ಬಗಳ ಸಂದರ್ಭದಲ್ಲಿ ಸಹಕಾರ ನೀಡುತ್ತಿದ್ದು, ಈ ಬಾರಿಯ ಹೋಳಿ ಹಬ್ಬದ ಸಂದರ್ಭದಲ್ಲಿಯೂ ಪರಸ್ಪರ ಸಹಕಾರ ನೀಡಿ ಸಂತಸದಿಂದ ಹಬ್ಬ ಆಚರಿಸಬೇಕು. ಜಿಲ್ಲಾಡಳಿತ ಹಾಗೂ ಪೋಲಿಸ್ ಇಲಾಖೆಗೆ ಅವಶ್ಯಕ ಸಹಕಾರ ನೀಡುವಂತೆ ಅವರು ಸಲಹೆ ನೀಡಿದರು.

ಈ ಹಬ್ಬದ ಸಂದರ್ಭದಲ್ಲಿ ಪಿಯುಸಿ ವಿದ್ಯಾರ್ಥಿಗಳ ಪರೀಕ್ಷೆಗಳೂ ಇರುವದರಿಂದ ವಿದ್ಯಾರ್ಥಿಗಳಿಗೆ ಒತ್ತಾಯಪೂರ್ವಕವಾಗಿ ಬಣ್ಣ ಹಚ್ಚಬಾರದು. ಸಾರ್ವಜನಿಕರು ರಾಸಾಯನಿಕಯುಕ್ತ ಬಣ್ಣ ಬಳಸಬಾರದು. ಅದರಂತೆ ಕುಡಿಯುವ ನೀರಿನ ಮೂಲಗಳಲ್ಲಿ ರಾಸಾಯನಿಕ ಯುಕ್ತಬಣ್ಣ ಬೆರೆಸಬಾರದು. ವಿಶೇಷವಾಗಿ ಕುಡಿಯುವ ನೀರಿನ ಶುದ್ದೀಕರಣ ಘಟಕಗಳಲ್ಲಿ ರಾಸಾಯನಿಕ ಬಣ್ಣ ಬೆರೆಸಬಾರದು.

ಬ್ರಿಡ್ಜ್ ಕಮ್ ಬ್ಯಾರೇಜ್ ವ್ಯಾಪ್ತಿಯಲ್ಲಿ ಅಪಾಯಕಾರಿ ರೀತಿಯಲ್ಲಿ ಈಜು ಅಥವಾ ಸ್ನಾನ ಮಾಡಬಾರದು. ಅನ್ಯಧರ್ಮಿಯರಿಗೆ, ಮಹಿಳೆಯರಿಗೆ, ಹಿರಿಯ ನಾಗರಿಕರಿಗೆ ಹಾಗೂ ಮಕ್ಕಳಿಗೆ ನೋವಾಗದಂತೆ ಬಣ್ಣ ಆಡಬೇಕು. ಬಣ್ಣ ಆಡುವುದನ್ನು ಅಂದಿನ ದಿನದಂದು ಬೆಳಿಗ್ಗೆ 7 ರಿಂದ ಮಧ್ಯಾಹ್ನ 1ಗಂಟೆಯವರೆಗೆ ಮುಕ್ತಾಯಗೊಳಿಸಲು ಹಾಗೂ ಹಬ್ಬದ ಎರಡೂ ದಿನಗಳ ಸಂದರ್ಭದಲ್ಲಿ ಮದ್ಯಪಾನ ಹಾಗೂ ಮದ್ಯ ಮಾರಾಟ ನಿಷೇಧಿಸಲಾಗುವುದು ಎಂದು ಅವರು ಹೇಳಿದರು.

ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಶ್ರೀ ಪೃಥ್ವಿಕ್ ಶಂಕರ್ ಅವರು ಮಾತನಾಡಿ, ಹೋಳಿಹಬ್ಬದ ಸಂದರ್ಭದಲ್ಲಿ ಶಾಂತಿ ಹಾಗೂ ಸುವ್ಯವಸ್ಥೆ ಕಾಪಾಡಲು ಅವಶ್ಯಕ ಕ್ರಮಗಳನ್ನು ಕೈಗೊಳ್ಳಲಾಗುವುದು. ಸೂಕ್ತ ಪೋಲಿಸ್ ಬಂದೋಬಸ್ತ್ ಮಾಡಲಾಗುತ್ತಿದ್ದು, ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡಲಾಗುವುದಿಲ್ಲ.ಹಬ್ಬದ ಸಂದರ್ಭದಲ್ಲಿ ಶಾಂತಿ ಕದಡಿಸುವವರ ವಿರುದ್ಧ ತೀವ್ರ ನಿಗಾ ಇಡಲಾಗುತ್ತದೆ. ರಮ್ಜಾನ್ ಮಾಸ ಹಾಗೂ ಹೋಳಿ ಹಬ್ಬ ಒಂದೇ ಬಾರಿಗೆ ಬಂದಿರುವುದರಿಂದ ಎಲ್ಲ ಧರ್ಮದವರು ಪರಸ್ಪರ ಸೌಹಾರ್ದತೆಯಿಂದ ಈ ಹಬ್ಬ ಆಚರಿಸಬೇಕು. ಸಾಮಾಜಿಕ ಜಾಲತಾಣಗಳ ಮೇಲೆ ನಿಗಾ ಇಡಲಾಗಿದ್ದು,ಶಾಂತಿ ಕದಡುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು. ಧಾರ್ಮಿಕ ಸ್ಥಳಗಳಾದ ಮಂದಿರ ಮಸೀದಿ ಹತ್ತಿರ ಸೂಕ್ತ ಪೋಲಿಸ್ ಬಂದೋಬಸ್ತ್ ಮಾಡಲಾಗುವುದು. ಅನ್ಯಕೋಮಿಗೆ ತೊಂದರೆಯಾಗುವ ರೀತಿಯಲ್ಲಿ ಪ್ರಚೋದನಕಾರಿ ಹಾಡುಗಳನ್ನು ಡಿಜೆ ಧ್ವನಿವರ್ಧಕಗಳ ಮೂಲಕ ಬಳಸದಂತೆ ಸಲಹೆ ನೀಡಿದ ಅವರು ಪ್ರತಿಬಾರಿ ಆಚರಿಸಿದಂತೆ ಈ ಬಾರಿಯು ಸಂತಸ, ಶಾಂತಿ, ಸೌಹಾರ್ದಯುತವಾಗಿ ಮತ್ತು ಪರಸ್ಪರ ಸಹಕಾರದೊಂದಿಗೆ ಹಬ್ಬ ಆಚರಿಸಲು ಅವರು ಸಲಹೆ ನೀಡಿದರು.

ಈ ಹಬ್ಬದ ಅಂಗವಾಗಿ ಒತ್ತಾಯಪೂರ್ವಕವಾಗಿ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಅನ್ಯ ಧರ್ಮಿಯರಿಗೆ ಬಣ್ಣ ಎರಚದಂತೆ ಅವರು ಸಲಹೆ ನೀಡಿ,ಯಾದಗಿರಿ ನಗರದ ಪ್ರಮುಖ ರಸ್ತೆಗಳಲ್ಲಿ ಹೋಳಿ ಹಬ್ಬದ ಸಂದರ್ಭದಲ್ಲಿ ಕೈಗೊಳ್ಳಲಾಗುವ ಬಂಡಿಗಳು ಸರಾಗವಾಗಿ ಹೋಗಲು ನಗರಸಭೆ ಮೂಲಕ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಡಿವೈಎಸ್ಪಿಗಳಾದ ಶ್ರೀ ಸುರೇಶ್, ಜಾವೇದ್ ಇನಾಮದಾರ, ಹಿಂದೂ ಸಮಾಜದ ಶರಣಪ್ಪ ಗುಳಿಗಿ, ಮರೆಪ್ಪ ಚಟ್ಟರ್ಕರ್, ಶರಣಪ್ಪ ಜಾಕಾ, ಮಲ್ಲಿಕಾರ್ಜುನ ಕ್ರಾಂತಿ, ಭೀಮು ಪೂಜಾರಿ, ಮುಸ್ಲಿಂ ಸಮಾಜದ ಸಬ್ದಾನ್ ಮೂಸಾ, ಹಾಫೀಜ್ ಪಟೇಲ್, ಜಿಲಾನಿ, ಬಾಬಾ ಹಾಗೂ ಇತರರು ಉಪಸ್ಥಿತರಿದ್ದು ಸೂಕ್ತ ಸಲಹೆ ಸೂಚನೆ ನೀಡಿದರು.

ರಣಜಿ ಫೈನಲ್: ಆಟಗಾರರನ್ನು ಹುರಿದುಂಬಿಸಿದ ಜಮ್ಮು ಕಾಶ್ಮೀರ ಸಿಎಂ ಓಮರ್ ಅಬ್ದುಲ್ಲಾ

ಹುಬ್ಬಳ್ಳಿ,ಫೆ.28-

ಇಲ್ಲಿನ ರಾಜನಗರ ಕೆಎಸ್‌ಸಿಎ ಮೈದಾನದಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ 2025-26ರ ಫೈನಲ್ ಪಂದ್ಯದ ವೀಕ್ಷಣೆಗೆ ಜಮ್ಮು ಕಾಶ್ಮೀರ ಮುಖ್ಯಮಂತ್ರಿ ಓಮರ್ ಅಬ್ದುಲ್ಲಾ ಆಗಮಿಸಿದ್ದಾರೆ.

ಶುಕ್ರವಾರ ಸಂಜೆ ಹುಬ್ಬಳ್ಳಿಗೆ ಆಗಮಿಸಿರುವ ಅವರು ಇಂದು ಬೆಳಗ್ಗೆ 10 ಗಂಟೆಗೆ ಮೈದಾನದಲ್ಲಿ ಕೊನೆಯ ದಿನದ ಆಟ ವೀಕ್ಷಿಸಿದರು. ಜಮ್ಮು ಕಾಶ್ಮೀರ ಆರಂಭಿಕ ಬ್ಯಾಟರ್ ಕಮ್ರಾನ್ ಇಕ್ಬಾಲ್ ಶತಕ ಗಳಿಸಿದಾಗ ಚಪ್ಪಾಳೆ ತಟ್ಟಿ ಅಭಿನಂದಿಸಿದರು. ಸಿಎಂ ಆಗಮನದ ಹಿನ್ನೆಲೆಯಲ್ಲಿ ಮೈದಾನದಲ್ಲಿ ಪೊಲೀಸ್ ಭದ್ರತಾ ವ್ಯವಸ್ಥೆ ಹೆಚ್ಚಿಸಲಾಗಿದೆ.

ಫೈನಲ್‌ನಲ್ಲಿ ಕರ್ನಾಟಕ ವಿರುದ್ಧದ ಪ್ರವಾಸಿ ತಂಡ ಜಮ್ಮು ಕಾಶ್ಮೀರ ಮೇಲುಗೈ ಸಾಧಿಸಿದ್ದು, ಐತಿಹಾಸಿಕ ರಣಜಿ ಟ್ರೋಫಿ ಗೆಲ್ಲುವ ಹೊಸ್ತಿಲಲ್ಲಿದೆ. ಜಮ್ಮು ಕಾಶ್ಮೀರ ತಂಡದ ಎರಡನೇ ಇನ್ನಿಂಗ್ಸ್ ಐದನೇ ದಿನವೂ ಮುಂದುವರೆದಿದ್ದು, 95 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 285 ರನ್ ಗಳಿಸಿದೆ. ಈ ಮೂಲಕ ಕರ್ನಾಟಕದ ವಿರುದ್ಧ 576 ರನ್‌ಗಳ ಮುನ್ನಡೆ ಪಡೆದು ಆಟ ಮುಂದುವರೆಸಿದೆ. ಐದನೇ ದಿನ ಮೊದಲ ಅವಧಿಯಲ್ಲಿ ಕರ್ನಾಟಕಕ್ಕೆ ಒಂದೂ ವಿಕೆಟ್ ಪಡೆಯಲು ಸಾಧ್ಯವಾಗಿಲ್ಲ.

ನಾಲ್ಕನೇ ದಿನವಾದ ಶುಕ್ರವಾರ ಕರ್ನಾಟಕ ತಂಡ ಮೊದಲ ಇನ್ನಿಂಗ್ಸ್ ನಲ್ಲಿ ಜಮ್ಮು ಕಾಶ್ಮೀರದ 584 ರನ್‌ಗಳಿಗೆ ಪ್ರತ್ಯುತ್ತರವಾಗಿ, 93.3 ಓವರ್‌ಗಳಲ್ಲಿ 293 ರನ್‌ಗೆ ಆಲೌಟ್ ಆಯಿತು. ಈ ಮೂಲಕ 291 ರನ್‌ಗಳ ಹಿನ್ನಡೆ ಅನುಭವಿಸಿತ್ತು.

ಕರ್ನಾಟಕದ ಪರ ಅನುಭವಿ ಮಯಾಂಕ್ ಅಗರವಾಲ್ ಹೊರತುಪಡಿಸಿ ಉಳಿದ ಬ್ಯಾಟರ್‌ಗಳು ಹೋರಾಟ ತೋರುವಲ್ಲಿ ವಿಫಲರಾಗಿದ್ದರು. ನಾಲ್ಕನೇ ದಿನವೂ ಅಗರವಾಲ್ ಏಕಾಂಗಿ ಹೋರಾಟ ನಡೆಸಿದ್ದರು. ಕ್ರೀಸ್‌ನಲ್ಲಿ 443 ನಿಮಿಷ ನಿಂತಿದ್ದ ಅವರು 260 ಎಸೆತಗಳಲ್ಲಿ 160 ರನ್ ಗಳಿಸಿದ್ದಾಗ ನಬಿ ಬೌಲಿಂಗ್‌ನಲ್ಲಿ ಎಲ್‌ಬಿ ಬಲೆಗೆ ಬಿದ್ದರು.

291 ರನ್‌ಗಳ ಮುನ್ನಡೆಯೊಂದಿಗೆ ಎರಡನೇ ಇನ್ನಿಂಗ್ಸ್ ಆರಂಭಿಸಿರುವ ಜಮ್ಮು ಕಾಶ್ಮೀರ ತಂಡ, 4ನೇ ದಿನದ ಅಂತ್ಯಕ್ಕೆ ಜಮ್ಮು ಕಾಶ್ಮೀರ 57 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 186 ರನ್ ಗಳಿಸಿ, 477 ರನ್‌ಗಳ ಮುನ್ನಡೆ ಸಾಧಿಸಿತ್ತು.

ಯಾವರ್ ಹಸ್ಸನ್ 4, ಶುಭಂ ಪುಂದಿರ್ 4, ನಾಯಕ ಪರಾಸ್ ದೋಗ್ರಾ 16 ಹಾಗೂ ಅಬ್ದುಲ್ ಸಮದ್ 32 ರನ್‌ಗಳಿಗೆ ಔಟಾಗಿದ್ದರು. ಕೊನೆಯ ದಿನ ಬ್ಯಾಟಿಂಗ್ ಮುಂದುವರೆಸಿದ ಕಮ್ರಾನ್ ಇಕ್ಬಾನ್ ಭರ್ಜರಿ ಶತಕ (124) ಗಳಿಸಿ ಆಟವಾಡುತ್ತಿದ್ದಾರೆ. ಇವರಿಗೆ ಸಾಹಿಲ್ ಲೋಹ್ರಾ (81★) ತಕ್ಕ ಸಾಥ್ ನೀಡಿದ್ದು, ಶತಕದ ಸನಿಹದಲ್ಲಿದ್ದಾರೆ. ಕರ್ನಾಟಕದ ಪರ ಪ್ರಸಿದ್ಧ್ ಕೃಷ್ಣ 2 ಹಾಗೂ ವಿಜಯಕುಮಾರ್ ವೈಶಾಖ್ ಮತ್ತು ಶ್ರೇಯಸ್ ಗೋಪಾಲ್ ತಲಾ ಒಂದು ವಿಕೆಟ್ ಪಡೆದಿದ್ದಾರೆ.

ಪಂದ್ಯವು ಡ್ರಾದಲ್ಲಿ ಕೊನೆಗೊಳ್ಳಲಿದ್ದು, ಮೊದಲ ಇನ್ನಿಂಗ್ಸ್ ಮುನ್ನಡೆ ಆಧಾರದ ಮೇಲೆ ಜಮ್ಮು ಕಾಶ್ಮೀರ ತಂಡವು ಚಾಂಪಿಯನ್ ಪಟ್ಟ ಅಲಂಕರಿಸಲಿದೆ. ಇದರೊಂದಿಗೆ ಕಣಿವೆನಾಡಿನ ತಂಡವು ಚೊಚ್ಚಲ ಬಾರಿಗೆ ರಣಜಿ ಕಪ್ ಎತ್ತಿ ಹಿಡಿಯಲಿದೆ.

ವಿಶೇಷಚೇತನರಿಗೆ ಮೋಟಾರು ಚಾಲಿತ ತ್ರಿಚಕ್ರ ವಾಹನ ವಿತರಣೆ



ಕೊಪ್ಪಳ ಫೆ.28-

ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕಾರ್ಮಿಕ ಇಲಾಖೆ, ಕಾರ್ಖಾನೆ ಮತ್ತು ಬಾಯ್ಸ ರ್‌ಗಳ ಸ್ವಾಸ್ಥ ಇಲಾಖೆ, ಜಿಲ್ಲಾ ಅಂಗವಿಕಲರ ಕಲ್ಯಾಣ ಇಲಾಖೆ ಹಾಗೂ ಪ್ರಾದೇಶಿಕ ಸಾರಿಗೆ ಇಲಾಖೆ ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಜಿಲ್ಲಾಡಳಿತ ಭವನದ ಆವರಣದಲ್ಲಿ ಜಿಲ್ಲೆಯ ವಿಶೇಷ ಚೇತನರಿಗೆ ಮೋಟಾರು ಚಾಲಿತ ತ್ರಿಚಕ್ರ ವಾಹನ (ಅಛಿಚಟಕಿಛಿಛ ಭಿಜಿಜಿಛಿ)ಗಳ ವಿತರಣೆ ಮಾಡಲಾಯಿತು.

ಈ ಕಾರ್ಯಕ್ರಮಕ್ಕೆ ಕೊಪ್ಪಳ ಸಂಸದರಾದ ಕೆ.ರಾಜಶೇಖರ್ ಬಸವರಾಜ ಹಿಟ್ನಾಳ್ ಅವರು ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ವಿಶೇಷ ಚೇತನರ ಸ್ವಾವಲಂಬನೆ ಹಾಗೂ ಸಾಮಾಜಿಕ ಸಬಲೀಕರಣಕ್ಕೆ ರಾಜ್ಯ ಸರ್ಕಾರವು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ವಿವಿಧ ಇಲಾಖೆಗಳ ಮೂಲಕ ಹಲವು ಯೋಜನೆಗಳನ್ನು ಜಾರಿಗೊಳಿಸುತ್ತಿದ್ದು, ಇದರ ಭಾಗವಾಗಿ ಇಂದು ಜಿಲ್ಲೆಯಲ್ಲಿ ವಿತರಣೆ ಮಾಡಲಾದ ಮೋಟಾರು ಚಾಲಿತ ತ್ರಿಚಕ್ರ ವಾಹನಗಳು, ಈ ಫಲಾನುಭವಿಗಳ ದೈನಂದಿನ ಪ್ರಯಾಣಕ್ಕೆ ಅನುಕೂಲವಾಗಲಿವೆ. ಶಿಕ್ಷಣ, ಉದ್ಯೋಗ ಹಾಗೂ ಸ್ವಯಂ ಉದ್ಯಮ ಚಟುವಟಿಕೆಗಳಿಗೆ ಈ ವಾಹನಗಳು ಸಹಕಾರಿಯಾಗಲಿವೆ ಮತ್ತು ವಿಶೇಷ ಚೇತನರು ಆತ್ಮವಿಶ್ವಾಸದಿಂದ ಬದುಕನ್ನು ಸಾಗಿಸಲು ಈ ವಾಹನಗಳು ಅವರಿಗೆ ನೆರವಾಗಲಿವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕೊಪ್ಪಳ ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ್, ಜಿಲ್ಲಾ ಕಾರ್ಮಿಕ ಅಧಿಕಾರಿ ಸುಧಾ ಗರಗ, ಕೊಪ್ಪಳ ಕಾರ್ಖಾನೆ ಮತ್ತು ಬಾಯ್ಲರ್‌ಗಳ ಸ್ವಾಸ್ಥ ಇಲಾಖೆಯ ಸಹಾಯಕ ನಿರ್ದೇಶಕ ವಿಜಯಕುಮಾರ ಬಿ., ಗಂಗಾವತಿ ಕಾರ್ಮಿಕ ನಿರೀಕ್ಷಕ ಎಂ.ಅಶೋಕ, ಕೊಪ್ಪಳ ಕಾರ್ಮಿಕ ನಿರೀಕ್ಷಕಿ ಮಂಜುಳಾ ವಿಶ್ವನಾಥ, ಕುಷ್ಟಗಿ ಕಾರ್ಮಿಕ ನಿರೀಕ್ಷಕಿ ನಿವೇದಿತಾ, ಜಿಲ್ಲಾ ಬಾಲಕಾರ್ಮಿಕ ಯೋಜನಾ ನಿರ್ದೇಶಕ ಬಸವರಾಜ ಹಿರೇಗೌಡ್ರ, ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಇತರೆ ಜನಪ್ರತಿನಿಧಿಗಳು, ವಿಶೇಷ ಚೇತನರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.



ಕಿಶೋರ ಕಾರ್ಮಿಕ ಮಗು ಮತ್ತೆ

ಬೀದರ, ಫೆ.27-

ಔರಾದ್ ತಹಸೀಲ್ದಾರ ಮಹೇಶ್ ಪಾಟೀಲ್ ಅವರ ನೇತೃತ್ವದ ತಂಡದ ವತಿಯಿಂದ ಫೆ.26 ರಂದು ಔರಾದನ ಲ್ಲಿರುವ ಅಂಗಡಿ, ಗ್ಯಾರೇಜ್, ಹೋಟೆಲ್, ಬೇಕರಿ ಮತ್ತು ಬಸ್ ನಿಲ್ದಾಣದ ಒಳಗಿರುವ ಅಂಗಡಿಗಳಿಗೆ ತಪಾಸಣೆ ಮಾಡಿ ಬಾಲಕಾರ್ಮಿಕ ರನ್ನು ಮತ್ತು ಕಿಶೋರ ಕಾರ್ಮಿಕ ರನ್ನು ನೇಮಿಸಿಕೊಳ್ಳಬಾರದೆಂದು ಅರಿವು ಮೂಡಿಸಲಾಯಿತು ಮತ್ತು ಕರ ಪತ್ರ ಹಂಚಲಾಯಿತು. ಸದರಿ ದಾಳಿಯಲ್ಲಿ 1 ಕಿಶೋರ ಕಾರ್ಮಿಕ ಕಂಡು ಬಂದಿದ್ದು ಅವರ ಶಾಲಾ ದಾಖಲಾತಿಯನ್ನು ಪರಿಶೀಲಿಸಿ ಅಂಗಡಿ ಮಾಲೀಕರ ವಿರುದ್ಧ ಕಾಯ್ದೆ ಅನ್ವಯ ಮುಂದಿನ ಕ್ರಮ ಕೈಗೊಳ್ಳಲಾಗುವುದು ತಿಳಿಸಿದರು.

ಫೆ.26ರಂದು ಔರಾದ್ ತಹಸೀಲ್ದಾರ ಕಾರ್ಯಾಲಯದಲ್ಲಿ ಬಾಲ ಮತ್ತು ಕಿಶೋರ್ ಕಾರ್ಮಿಕ (ನಿಷೇದ್ ಮತ್ತು ನಿಯಂತ್ರಣ) ಕಾಯ್ದೆ 1986. ಪದ್ಧತಿ ನಿರ್ಮೂಲನೆ ಕುರಿತ 1ನೇ ತ್ರೈಮಾಸಿಕ ತಾಲೂಕ ಕಾರ್ಯಪಡೆ ಸಮಿತಿ ಸಭೆ ಮತ್ತು ಕಾರ್ಯಕಾರಿಣಿ ಸಮಿತಿ ಹಾಗೂ ಪುನರ್ವಸತಿ ಸಮಿತಿ ಸಭೆಯ ನಂತರ ಈ ದಾಳಿ ನಡೆಸಲಾಗಿದೆ.

ಈ ಸಭೆಯಲ್ಲಿ ರಾಹುಲ ಕಾರ್ಮಿಕ ನಿರೀಕ್ಷಕರು ಔರಾದ ಹಾಗೂ ಶ್ರೀ ಅರ್ಜುನ್ ಮಾನ್ಯ ಯೋಜನಾ ನಿರ್ದೇಶಕರು ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಕಾರ್ಮಿಕ ಇಲಾಖೆ ಬೀದರ್, ಮಾನ್ಯ ಶಿಶು ಅಭಿವೃದ್ಧಿ ಯೋಜನಾಧಿ ಕಾರಿಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಔರಾದ ಗುರುಸಿದ್ದಪ್ಪ ವ್ಯವಸ್ಥಪಕರು ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಾರ್ವಜನಿಕ ಶಿಕ್ಷಣ ಇಲಾಖೆ ಔರಾದ, ಆರೋಗ್ಯ ಇಲಾಖೆ, ಶಫಿಯೋದ್ದಿನ್ ಪೊಲೀಸ್ ಠಾಣೆ ಸಿಬ್ಬಂದಿ ವೃತ್ತ ನಿರೀಕ್ಷಕರು ಔರಾದ, ಮಕ್ಕಳ ಕ್ಷೇತ್ರ ಕಾರ್ಯ ನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆ ಸೇವಕರು ಔರಾದ, ಮಕ್ಕಳ ಸಹಾಯವಾಣಿ ಸುನಿಲ್ ಶ್ರೀಮತಿ ಸಂಗೀತಾ ಹಾಗೂ ರಾಘುನಾಥ್ ಕಾರ್ಮಿಕ ಇಲಾಖೆಯ ಸಿಬ್ಬಂದಿ ರವರು ಭಾಗವಹಿಸಿದ್ದರು.

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗ' ಎಂ.ವೈ.ಪಾಟೀಲ್ ಅಡಿಗಲ್ಲು



ಅಫಜಲಪುರ:

ತಾಲೂಕಿನ ಹಿಂಚಗೇರಾ ಗ್ರಾಮದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಂ.ವೈ.ಪಾಟೀಲ್ ಅಡಿಗಲ್ಲು ನೆರವೇರಿಸಿದರು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಶಾಸಕ ಎಮ್.ವೈ.ಪಾಟೀಲ:ಭಾರತ ದೇಶ ಅಭಿವೃದ್ಧಿ ಹೊಂದುತ್ತಿರುವ ದೇಶವಾಗಿದ್ದರಿಂದ ಪ್ರತಿ ದಿನವೂ ಹಲವಾರು ಬೇಡಿಕೆಗಳು ನಮ್ಮ ಮುಂದೆ ಬರುತ್ತವೆ,ಹೀಗಾಗಿ ಹಂತ ಹಂತವಾಗಿ ಎಲ್ಲವೂ ಮಾಡಿಕೊಡುವ ಪ್ರಯತ್ನ ಮಾಡುತ್ತೇವೆ ಎಂದು ಶಾಸಕ ಎಂ.ವೈ.ಪಾಟೀಲ್ ತಿಳಿಸಿದರು.

ತಾಲೂಕಿನ ಹಿಂಚಗೇರಾ ಗ್ರಾಮದ ಹರಿಜನ ಬಡಾವಣೆಯಲ್ಲಿ ಸಿಸಿ ರಸ್ತೆ ಮತ್ತು ಚರಂಡಿ, ಗ್ರಂಥಾಲಯ ನಿರ್ಮಾಣ,ಶ್ರೀ ನಿಂಗರಾಯ ದೇವಸ್ಥಾನ ಜೀರ್ಣೋ ದ್ಧಾರ ಕಾಮಗಾರಿಗೆ ಅಡಿಗಲ್ಲು ನೆರವೇರಿಸಿ ಮಾತನಾಡಿದ ಅವರು,ಹಿಂಚಗೇರಾ ಗ್ರಾಮದ ಅಕ್ಕಪಕ್ಕದಲ್ಲಿ ಕಬ್ಬು ಬೆಳೆಯುವ ಪ್ರದೇಶ ಇರುವುದರಿಂದ,ಜಮೀನುಗಳಿಗೆ ಹೋಗಲು ರಸ್ತೆ ನಿರ್ಮಾಣ ಮಾಡಿ ಕೊಡುತ್ತೇವೆ.ಅಲ್ಲದೇ ಬಸ್ ನಿಲ್ದಾಣ, ಸ್ಮಶಾನ ಬಗ್ಗೆ ಗ್ರಾಮಸ್ಥರು ಬೇಡಿಕೆ ಇಟ್ಟಿದ್ದರಿಂದ ಶೀಘ್ರವೇ ಈ ಬೇಡಿಕೆಗಳನ್ನು ಪೂರೈಸಲಾಗುವುದು.ಅಲ್ಲದೇ ಹರಿಜನ ಬಡಾವಣೆ ಸ್ಥಳಾಂತರದ ಪೈಲ್ ಕಾರಣಾಂತರಗಳಿಂದ ವಾಪಸ್ ಬಂದಿದ್ದು,ಶೀಘ್ರವೇ ಜಿಲ್ಲಾಧಿಕಾರಿಗಳ ಜತೆ ಚರ್ಚಿಸಿ ಶಾಶ್ವತವಾಗಿ ಸ್ಥಳಾಂತರಿಸುವ ಕೆಲಸ ಮಾಡಲಾಗುವುದು ಎಂದು ಭರವಸೆ ನೀಡಿದರು.

ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶರಣು ಕುಂಬಾರ ಮಾತನಾಡಿ,ಹೊಸ ಬಡಾವಣೆಯಲ್ಲಿ ವಿದ್ಯುತ್ ಪರಿವರ್ತನೆ ಅಳವಡಿಸಬೇಕು, ಹಿಂಚಗೇರಾ ಗ್ರಾಮಕ್ಕೆ ಬಸ್ ನಿಲ್ದಾಣ, ಸ್ಮಶಾನ ಭೂಮಿ ಮಂಜೂರು ಮಾಡಿಕೊಡಬೇಕೆಂದು ಮನವಿ ಮಾಡಿದರು.

ತಾಪಂ ಮಾಜಿ ಸದಸ್ಯ ಸುಭಾಷ್ ರೂಗಿ ಮಾತನಾಡಿ,ಗ್ರಾಮಕ್ಕೆ ಹಲವಾರು ಅಭಿವೃದ್ಧಿ ಕೆಲಸಗಳು ಶಾಸಕರಿಂದ ಆಗಿವೆ.ಅಲ್ಲದೇ ನದಿಗೆ ಹೋಗುವ ರಸ್ತೆ ಸಂಪೂರ್ಣವಾಗಿ ಹಾಳಾಗಿದ್ದು, ಕೂಡಲೇ ರಸ್ತೆ ನಿರ್ಮಾಣ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಎಇಇ ಅರುಣಕುಮಾರ ಬಿರಾದಾರ,ಶಿವಾನಂದ ಗಾಡಿ ಸಾಹುಕಾರ,ಶರಣಪ್ಪ ಮಾಂಗ,ಕಲ್ಯಾಣಿ ಸಿಂದಗೇರಿ, ಖಾಸೀಂ ಪಟೇಲ್, ಯಲ್ಲಾಲಿಂಗ ಜಮಾದಾರ,ಪರಮೇಶ್ವರ ಕುಂಬಾರ,ಶಿವ ರಾಯಗೌಡ ಪಾಟೀಲ್, ಲಕ್ಷಣ ತಲಬಾಗಿಲು,ಕಲ್ಲಪ್ಪ ಕಲ್ಲೂರ,ಚಂದ್ರಾಮಗೌಡ,ಆನಂದ ದೊಡ್ಮನಿ, ಈರಣ್ಣ ಸುತಾರ,ಕಾಂತಪ್ಪ ಹುಲ್ಲೂರ,ಮುತ್ತೂಮ್ ಪಟೇಲ್, ಚಂದ್ರಾಮ ಜೇವರ್ಗಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕುರಿಗಾರರಿಗೆ ಉಣ್ಣೆ ಸಂಸ್ಕರಣೆ ಮತ್ತು ಆಧುನಿಕ ತಂತ್ರಜ್ಞಾನದ ತರಬೇತಿ: ಪ್ರಮಾಣ ಪತ್ರ ವಿತರಣೆ



ಕಲಬುರಗಿ, ಫೆ.28-

ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ಕಲಬುರಗಿ ಹಾಗೂ ಕೇಂದ್ರಿಯ ಉಣ್ಣೆ ಅಭಿವೃದ್ಧಿ ಮಂಡಳಿ ಜೋಧ ಪೂರ ಇವರುಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಐದು ದಿನಗಳ ಉಣ್ಣೆ ಸಂಸ್ಕರಣೆ, ಮೌಲ್ಯವರ್ಧನೆ ಹಾಗೂ ಯಾಂತ್ರಿ ಕೃತ ಉಣ್ಣೆ ಕಟಾವು ತರಬೇತಿ ಕಾರ್ಯಕ್ರಮವು ಹಮ್ಮಿಕೊಳ್ಳಲಾಗಿತ್ತು.

ಜಿಲ್ಲೆಯ ವಿವಿಧ ತಾಲ್ಲೂಕುಗಳ ಸುಮಾರು 50 ಜನ ಕುರಿ ಸಾಕಾಣಿಕೆದಾರರು ಈ ತರಬೇತಿ ಶಿಬಿರದಲ್ಲಿ ಪಾಲ್ಗೊಂಡು ತಾಂತ್ರಿಕ ಜ್ಞಾನ ಪಡೆದರು. ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ದೇವಿಂದ್ರಪ್ಪ ಮರ್ತೂರ ಅವರು ತರಬೇತಿದಾರರಿಗೆ ಪ್ರಮಾಣ ಪತ್ರ ಹಾಗೂ ವಲಸೆ ಕುರಿಗಾರರಿಗೆ ಗುರುತಿನ ಚೀಟಿಗಳನ್ನು ವಿತರಿಸಿ ಮಾತನಾಡಿದ ಅವರು ಶೀಘ್ರದಲ್ಲೇ ಕುರಿಗಾರರಿಗೆ ಅಗತ್ಯವಿರುವ ಜಂತು ನಾಶಕ ಔಷಧಿ ಮತ್ತು ಪರಿಕರ ಕಿಟ್‌ಗಳನ್ನು ವಿತರಿಸಲಾಗುವುದು ಎಂದು ಭರವಸೆ ನೀಡಿದರು. ಅಲ್ಲದೆ, ಕುರಿ/ಮೇಕೆ ಸಾಕಾಣಿಕೆಗಾಗಿ ಸಹಾಯಧನ ನೀಡುವ ಬಗ್ಗೆ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಾಗಿ ಅವರು ತಿಳಿಸಿದರು.

ಕಲಬುರಗಿ ಪಶುಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆ ಉಪ ನಿರ್ದೇಶಕ ಡಾ. ಸಂಜಯ್ ರೆಡ್ಡಿ ಅವರು ಮಾತನಾಡಿ ಕುರಿ ಮತ್ತು ಮೇಕೆಗಳಿಗೆ ಕಾಲಕಾಲಕ್ಕೆ ಲಸಿಕೆ ಮತ್ತು ಚಿಕಿತ್ಸೆ ನೀಡುವ ಕುರಿತು ಮಾಹಿತಿ ನೀಡಿದರು.

ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ಉಪ ನಿರ್ದೇಶಕ ಡಾ. ರವಿಂದ್ರನಾಥ ಅವರು ಮಾತನಾಡಿ ಐದು ದಿನಗಳ ಈ ತರಬೇತಿಯ ಉದ್ದೇಶ ಮತ್ತು ಅದರ ಕಾರ್ಯವಿಧಾನಗಳ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು.

ಪಶು ವೈದ್ಯಕೀಯ ಪರಿಕ್ಷಕರ ತರಬೇತಿ ಕೇಂದ್ರ ಉಪನಿರ್ದೇಶಕರ ಡಾ. ದಯಾನಂದ ಹಕ್ಕಾಪಕ್ಕಿ ಅವರು ಮಾತನಾಡಿ ಹೊಸದಾಗಿ ಕುರಿ/ಮೇಕೆ ಸಾಕಾಣಿಕೆ ಆರಂಭಿಸಲು ಆಸಕ್ತಿ ಇರುವ ರೈತರು ಕಛೇರಿಗೆ ಬಂದು ಅರ್ಜಿ ಸಲ್ಲಿಸಲು ಕೋರಿದರು. ಡಾ. ಶಂಕರ ಕಣ್ಣಿ ಅವರು ಕಾರ್ಯಕ್ರಮದ ಸ್ವಾಗತ ಮತ್ತು ನಿರೂಪಣೆ ಮಾಡಿದರು.



ಯುವಜನತೆಯನ್ನು ಮಾದಕ ವ್ಯಸನದಿಂದ ಮುಕ್ತಗೊಳಿಸಿ: ಜಿಲ್ಲಾಧಿಕಾರಿಗಳ ಕಟ್ಟುನಿಟ್ಟಿನ ಸೂಚನೆ

ವಿಜಯನಗರ , ಫೆ.28-

ಜಿಲ್ಲೆಯಲ್ಲಿ ಮಾದಕ ವಸ್ತುಗಳ ಹಾವಳಿಯನ್ನು ಸಂಪೂರ್ಣವಾಗಿ ತಡೆಗಟ್ಟಲು ಪೊಲೀಸ್, ಅಬಕಾರಿ ಮತ್ತು ಶಿಕ್ಷಣ ಇಲಾಖೆಗಳು ಸಮನ್ವಯದಿಂದ ಕೆಲಸ ಮಾಡಬೇಕು, ಎಂದು ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಇಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ 'ಜಿಲ್ಲಾ ಮಟ್ಟದ ನಾರ್ಕೋಟಿಕ್ಸ್ ಸಮನ್ವಯ ಸಮಿತಿ' ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಂಬಾಕು ಸೇವನೆಯಿಂದ ದೈಹಿಕವಾಗಿ ಮಾನಸಿಕವಾಗಿ ಸಾಕಷ್ಟು ದುಷ್ಪರಿಣಾಮ ಬೀರಲಿದೆ. ಇದರಿಂದ ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕವಾಗಿ ಸಂಕಷ್ಟಕ್ಕೆ ಸಿಲುಕಿ ಕುಟುಂಬ ಬೀದಿಗೆ ಬರಲಿದೆ. ಈ ನಿಟ್ಟಿನಲ್ಲಿ ಮದ್ಯ ಮಾದಕ ವಸ್ತುಗಳಿಂದ ದೂರವಿದ್ದು, ಮೌಲ್ಯಯುತವಾದ ಜೀವನ ಕಟ್ಟಿಕೊಳ್ಳುವಂತೆ ಸಲಹೆ ನೀಡಿದರು.

ಶಾಲಾ-ಕಾಲೇಜುಗಳ ಮೇಲೆ ನಿಗಾ: ಶಾಲಾ ಮತ್ತು ಕಾಲೇಜುಗಳ 100 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ತಂಬಾಕು ಅಥವಾ ಮಾದಕ ಪದಾರ್ಥಗಳ ಮಾರಾಟ ನಡೆಯದಂತೆ ನೋಡಿಕೊಳ್ಳಬೇಕು. ಶಾಲಾ ಕಾಲೇಜುಗಳ ತಡೆಗೋಡೆ ಅಥವಾ ಸೂಚನಾ ಫಲಕಗಳಲ್ಲಿ ತಂಬಾಕು ನಿಯಂತ್ರಣ ಕುರಿತು ಅಳವಡಿಸಬೇಕು. ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ಸೇವನೆ ಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಕಾರ್ಯಾಗಾರ ಆಯೋಜಿಸಿ ಜಾಗೃತಿ ಮೂಡಿಸಲು ತಿಳಿಸಿದರು.

ಔಷಧ ಅಂಗಡಿಗಳ ತಪಾಸಣೆ: ಜಿಲ್ಲೆಯಲ್ಲಿ ಔಷಧಿ ಅಂಗಡಿಗಳ ತಪಾಸಣೆ ನಡೆಸಬೇಕು. ಈ ವೇಳೆ ಯಾವುದೇ ರೀತಿಯ ಕಾನೂನು ಬಾಹಿರವಾಗಿ ಅಕ್ರಮವಾಗಿ ಮಾದಕ ವಸ್ತುಗಳ ಮಾರಾಟ ಮಾಡುವುದು ಕಂಡು ಬಂದಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮವಹಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು. ಸಾರಿಗೆ ಬಸ್‌ಗಳಲ್ಲಿ, ಬಸ್ ನಿಲ್ದಾಣ ಮತ್ತು ರೈಲ್ವೇ ನಿಲ್ದಾಣಗಳಲ್ಲಿ ಮಾದಕ ವಸ್ತುಗಳ ಅಕ್ರಮ ಸಾಗಾಟ ಬಗ್ಗೆ ಎಚ್ಚರ ವಹಿಸಬೇಕು ಎಂದ ಅವರು, ಮಾದಕ ಮುಕ್ತ ಸಮಾಜ ನಿರ್ಮಾಣ ಒಂದು ಇಲಾಖೆಯ ಜವಾಬ್ದಾರಿಯಲ್ಲ, ಪ್ರತಿಯೊಬ್ಬರೂ ಈ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಬೇಕು. ಸಾರ್ವಜನಿಕರು ತಮ್ಮ ವ್ಯಾಪ್ತಿಯಲ್ಲಿ ಇಂತಹ ಅಕ್ರಮ ಚಟುವಟಿಕೆ ಕಂಡುಬಂದಲ್ಲಿ ಕೂಡಲೇ 112 ಸಹಾಯವಾಣಿಗೆ ಕರೆ ಮಾಡಿ ಮಾಹಿತಿ ನೀಡಬೇಕು, ಎಂದು ಜಿಲ್ಲಾಧಿಕಾರಿಗಳು ಮನವಿ ಮಾಡಿದರು.

ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮಂಜುನಾಥ್, ಅಬಕಾರಿ ಉಪ ಆಯುಕ್ತ ಮಾದೇಶ್, ಆರೋಗ್ಯ ಇಲಾಖೆ ಅಧಿಕಾರಿ ಹಾಗೂ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಕೇಜ್ರೀವಾಲ್ ಖುಲಾಸೆ, ಒಂದೊಂದಾಗಿ ಕುಸಿಯುತ್ತಿರುವ ಬಿಜೆಪಿ ಹುನ್ನಾರಗಳು



ವರ್ಷಗಳ ಹಿಂದೆ ಯಾವ ನೈತಿಕ ನೆಲೆಗಟ್ಟನ್ನು ಮೋಶಾ ಜೋಡಿ ಕೇಜ್ರೀವಾಲ್ ಕಾಲ ಬುಡದಿಂದ ಕಿತ್ತುಕೊಳ್ಳಲಾಗಿತ್ತೋ, ಆ ನೈತಿಕ ನೆಲೆಗಟ್ಟನ್ನು ಆಮ್ ಆದ್ಮೀ ಪಾರ್ಟಿ ಆಂಶಿಕವಾಗಿಯಾದರೂ ಮರಳಿ ಗಳಿಸಿದೆ. ಭ್ರಷ್ಟಾಚಾರದ ಬಡಿಗೆಯನ್ನೇ ಬೀಸಿ ಕೆಡವಬೇಕೆಂಬುದು ಬಿಜೆಪಿ ರಣತಂತ್ರ. ಈ ಕಟ್ಟಕಡೆಯ ಹತಾರಿನ ಬೇಷರತ್ ಬಳಕೆಗೆ ನೈತಿಕ-ಅನೈತಿಕ, ನ್ಯಾಯ-ಅನ್ಯಾಯದ ಪರಿವೆಗಳು ಇರಲಿಲ್ಲ. ಎದ್ದರೆ ಕುಳಿತರೆ ಭ್ರಷ್ಟಾಚಾರದ ಆಪಾದನೆಗಳನ್ನು ಸುತ್ತಿ ಎಸೆಯಲಾಯಿತು.

ಆಮ್ ಆದ್ಮೀ ಪಕ್ಷದ ಇಬ್ಬರು ಹಿರಿಯ ಹುದ್ದರಿಗಳು ಭಾರೀ ಭ್ರಷ್ಟಾಚಾರದ ಆರೋಪದಿಂದ ಖುಲಾಸೆಯಾಗಿದ್ದಾರೆ. ಝಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರ ವಿರುದ್ಧ ಹೂಡಲಾಗಿದ್ದ ಅಕ್ರಮ ಹಣ ವರ್ಗಾವಣೆಯ ಮೊಕದ್ದಮೆಗೆ ನ್ಯಾಯಾಲಯ ತಡೆಯಾಜ್ಞೆ ನೀಡಿರುವುದು ಕೂಡ ಇತ್ತೀಚಿನ ವಿದ್ಯಮಾನ. ಹರಿಯಾಣದ ಮಾಜಿ ಮುಖ್ಯಮಂತ್ರಿ ಕಾಂಗ್ರೆಸ್ ನಾಯಕ ಭೂಪಿಂದರ್ ಹುಡ್ಡಾ ಅವರ ವಿರುದ್ಧ ಹೂಡಿದ್ದ ಮತ್ತೊಂದು ಮೊಕದ್ದಮೆಯನ್ನು ಪಂಜಾಬ್-ಹರಿಯಾಣ ಹೈಕೋರ್ಟು ಇತ್ತೀಚೆಗಷ್ಟೇ ರದ್ದು ಮಾಡಿತ್ತು.

ಕೇಜ್ರೀವಾಲ್ ಸಂಪುಟದ ಮಂತ್ರಿಯಾಗಿದ್ದ ಸತ್ಯೇಂದರ್ ಜೈನ್ ಅವರನ್ನು ಕೂಡ ಹುಸಿ ಕೇಸಿನಲ್ಲಿ ಇರುಕಿಸಿ ಎರಡು ವರ್ಷಗಳಿಗೂ ಹೆಚ್ಚು ಕಾಲ ಜಾಮೀನು- ವಿಚಾರಣೆ ಎರಡೂ ಇಲ್ಲದೆ ಕೊಳೆಯಿಸಲಾಯಿತು. 2025ರ ಆಗಸ್ಟ್ ನಲ್ಲಿ ದೋಷಮುಕ್ತರಾಗಿ ಹೊರಬಿದ್ದರು. ನಾಲ್ಕು ವರ್ಷಗಳ ತನಿಖೆಯ ನಂತರ ತಾನು ಹೂಡಿದ್ದ ಕೇಸಿನಲ್ಲಿ ಸಾಕ್ಷ್ಯಗಳಿಲ್ಲವೆಂದು ಸಿಬಿಐ ಮುಗಿತಾಯದ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿತ್ತು!

ದೆಹಲಿಯ ಮುಖ್ಯಮಂತ್ರಿಯಾಗಿದ್ದ ಅರವಿಂದ್ ಕೇಜ್ರೀವಾಲ್ ಮತ್ತು ಉಪಮುಖ್ಯಮಂತ್ರಿಯಾಗಿದ್ದ ಮನೀಶ್ ಸಿಸೋಡಿಯ ಅವರೊಂದಿಗೆ ಇತರೆ 21 ಮಂದಿ ಆಪಾದಿತರನ್ನು ದೆಹಲಿಯ ನ್ಯಾಯಾಲಯ ದೋಷಮುಕ್ತರೆಂದು ಸಾರಿದೆ. ಅಬಕಾರಿ ನೀತಿಗೆ ಸಂಬಂಧ ಇವರ ಮೇಲೆ ಹೂಡಲಾಗಿರುವ ಮೊಕದ್ದಮೆಗಳು ನಿರಾಧಾರ ಎಂದು ತೀರ್ಪು ನೀಡಿದೆ. ಸಾಕ್ಷ್ಯಗಳೇ ಇಲ್ಲವೆಂದು ಹೇಳಿದೆ.

ವರ್ಷಗಳ ಹಿಂದೆ ಯಾವ ನೈತಿಕ ನೆಲೆಗಟ್ಟನ್ನು ಮೋಶಾ ಜೋಡಿ ಕೇಜ್ರೀವಾಲ್ ಕಾಲ ಬುಡದಿಂದ ಕಿತ್ತುಕೊಳ್ಳಲಾಗಿತ್ತೋ, ಆ ನೈತಿಕ ನೆಲೆಗಟ್ಟನ್ನು ಆಮ್ ಆದ್ಮೀ ಪಾರ್ಟಿ ಆಂಶಿಕವಾಗಿಯಾದರೂ ಮರಳಿ ಗಳಿಸಿದೆ. ಕಳೆದುಕೊಂಡಿದ್ದ ನೈತಿಕ ಭೂಮಿಕೆ ಮರಳಿ ಕೈವಶವಾದ ಸಂತಸದಲ್ಲಿದ್ದಾರೆ ಕೇಜ್ರೀವಾಲ್. ತಮ್ಮ ವಿರುದ್ಧ ಹೂಡಲಾಗಿದ್ದ ಈ ಮೊಕದ್ದಮೆಯು ಸ್ವತಂತ್ರ ಭಾರತದ ಬಹುದೊಡ್ಡ ಒಳಸಂಚು ಎಂದು ಬಣ್ಣಿಸಿ ಕಣ್ಣೀರಾಗಿದ್ದಾರೆ.

ಭ್ರಷ್ಟಾಚಾರ ಮೈತಳೆದರೆ ಹೇಗಿರುತ್ತದೆಂದರೆ ಅರವಿಂದ್ ಕೇಜ್ರೀವಾಲ್ ಅವರಂತೆ ಇರುತ್ತದೆ ಎಂದು ಮೋದಿ-ಶಾ ಅವರ ಬಿಜೆಪಿ ಪ್ರಚಾರದ ಪ್ರವಾಹವನ್ನೇ ಹರಿಸಿತ್ತು. ಅದು ಎರಡು ವರ್ಷಗಳ ಹಿಂದಿನ ಕತೆ. ಅರ್ಧಂಬರ್ಧ ರಾಜ್ಯವಾದ ದೆಹಲಿ ವಿಧಾನಸಭೆಗೆ ಕಳೆದ ವರ್ಷ ನಡೆದ ಚುನಾವಣೆಯಲ್ಲಿ ಕೇಜ್ರೀವಾಲ್ ಅವರ ಆಮ್ ಆದ್ಮೀ ಪಾರ್ಟಿ ಸೋತಿತು. 70ರಲ್ಲಿ 22 ಸೀಟುಗಳು ದಕ್ಕಿದ್ದವು. 70ರಲ್ಲಿ 48 ಸ್ಥಾನ ಗೆದ್ದು ಬಿಜೆಪಿ ಸರ್ಕಾರ ರಚಿಸಿತು. ದೇಶವನ್ನೇ ಗೆದ್ದರೂ, ಮೂಗಿನ ಕೆಳಗಿನ ದೆಹಲಿ ಕೈಗೆ ಸಿಗದಿದ್ದ ಹತಾಶೆ ಮೋಶಾ ಅವರನ್ನು ಬಹುಕಾಲದಿಂದ ಕಾಡಿತ್ತು.

2014ರಲ್ಲಿ ಅಧಿಕಾರ ಹಿಡಿದು 10 ವರ್ಷಗಳಾದರೂ ದೆಹಲಿ ದಕ್ಕಲಿಲ್ಲವೆಂಬ ಕುದಿ, ಬಿಜೆಪಿ ನೇತೃತ್ವವನ್ನು ಕುರುಡು ಮಾಡಿತ್ತು. ಭ್ರಷ್ಟಾಚಾರದ ವಿರುದ್ಧ ಆಂದೋಲನದ ಅಲೆಯ ಮೇಲೆ ತೇಲಿ ಬಂದು ಅಧಿಕಾರ ಹಿಡಿದಿದ್ದ ಪಕ್ಷ, ಆಮ್ ಆದ್ಮಿ ಪಕ್ಷ. ಅದೇ ಭ್ರಷ್ಟಾಚಾರದ ಬಡಿಗೆಯನ್ನೇ ಬೀಸಿ ಕೆಡವಬೇಕೆಂಬುದು ಬಿಜೆಪಿ ರಣತಂತ್ರ. ಈ ಕಟ್ಟಕಡೆಯ ಹತಾರಿನ ಬೇಷರತ್ ಬಳಕೆಗೆ ನೈತಿಕ-ಅನೈತಿಕ, ನ್ಯಾಯ-ಅನ್ಯಾಯದ ಪರಿವೆಗಳು ಇರಲಿಲ್ಲ. ಎದ್ದರೆ ಕುಳಿತರೆ ಭ್ರಷ್ಟಾಚಾರದ ಆಪಾದನೆಗಳನ್ನು ಸುತ್ತಿ ಎಸೆಯಲಾಯಿತು. ಶಾಲಾ ಕಟ್ಟಡಗಳು, ಆಸ್ಪತ್ರೆಗಳು, ನೀರು ಸರಬರಾಜು, ವಿದ್ಯುತ್ ಪೂರೈಕೆಯಲ್ಲಿ ಹಗರಣಗಳು ನಡೆದಿವೆಯೆಂದು ಆಪಾದನೆಗಳನ್ನು ಹೊರಿಸಿ ಅವುಗಳಿಗೆ ಅಬ್ಬರದ ಪ್ರಚಾರವನ್ನೂ ನೀಡಲಾಯಿತು. ಗೋದೀ ಮೀಡಿಯಾ, ಮೋದಿಯವರ ಇಷಾರೆಗಳಿಗೆ ತಾಳ ಹಾಕಿತ್ತು.


ನಿತ್ಯ ಕಾಲು ಕೆದರಿ ಜಗಳ ಕಾಯುವ, ಚುನಾಯಿತ ಸರ್ಕಾರದ ಅಧಿಕಾರ ವ್ಯಾಪ್ತಿಯನ್ನೇ ಪ್ರಶ್ನಿಸುವ ಕದನಕುತೂಹಲಿ ಉಪರಾಜ್ಯಪಾಲರೊಬ್ಬರನ್ನು ಕೇಜ್ರೀವಾಲ್ ತಲೆಯ ಮೇಲೆ ಕೂರಿಸಲಾಯಿತು. ಹುಸಿ ಕದನಗಳಲ್ಲಿ ಆಪ್ ನ ಕೈಕಾಲುಗಳನ್ನು ಕಟ್ಟಿ ಹಾಕಲಾಯಿತು. ಸರ್ಕಾರಿ ಬಂಗಲೆ, ಸರ್ಕಾರಿ ವಾಹನ, ಕೆಂಪುದೀಪದ ಸೌಲಭ್ಯಗಳನ್ನು ನಿರಾಕರಿಸಿದ್ದ ಕೇಜ್ರೀವಾಲ್ ಪಕ್ಷ, ಆನಂತರ ಅವುಗಳಿಂದ ದೂರ ಉಳಿಯದೆ ಹೋಯಿತು. ಕೇಜ್ರೀವಾಲ್ ಖುದ್ದು ಸರ್ಕಾರಿ ನಿವಾಸ ಒಪ್ಪಿಕೊಂಡರು. ಸಾಲದೆಂಬಂತೆ ಹೊಸದೊಂದು ದೊಡ್ಡ ಬಂಗಲೆಯನ್ನು ಸಜ್ಜುಗೊಳಿಸಿಕೊಂಡರು. ಶೀಷ್ ಮಹಲ್ ಎಂಬ ಹೆಸರಿನ ಈ ಬಂಗಲೆಯ ವಿಲಾಸಿ ಸೌಲಭ್ಯಗಳ ಕುರಿತು ಬಿಜೆಪಿ ಬಹುದೊಡ್ಡ ಪ್ರಚಾರ ನಡೆಸಿತು.

ಈ ಹಂಚಿಕೆ-ಹುನ್ನಾರಗಳ ಪೈಕಿ ಕಡೆಗೂ ಬಲವಾಗಿ ಕಚ್ಚಿಕೊಂಡದ್ದು ಅಬಕಾರಿ ನೀತಿಯಲ್ಲಿ ಭ್ರಷ್ಟಾಚಾರದ ಆಪಾದನೆ. ಹಗರಣ- ಅಕ್ರಮ ಹಣ ವರ್ಗಾವಣೆ ಮೊಕದ್ದಮೆಗಳ ಅಡಕತ್ತರಿಯಲ್ಲಿ ಪೊರಕೆ ಪಕ್ಷವನ್ನು ಇರುಕಿಸಲಾಯಿತು. ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ಸಿಬಿಐ ಎರಡೂ ಮುಗಿಬಿದ್ದವು. ಉಪಮುಖ್ಯಮಂತ್ರಿ ಸಿಸೋಡಿಯಾ ಒಂದೂವರೆ ವರ್ಷಗಳಿಗೂ ಹೆಚ್ಚು ಕಾಲ ಜೈಲಿನಲ್ಲಿದ್ದರು. ಕೇಜ್ರೀವಾಲ್ ಗೆ ಐದು ತಿಂಗಳ ಸೆರೆವಾಸದ ನಂತರ ಜಾಮೀನು ದೊರೆಯಿತು. ಮುಖ್ಯಮಂತ್ರಿ ಹುದ್ದೆಯಲ್ಲಿದ್ದಾಗಲೇ ಬಂಧನಕ್ಕೊಳಗಾದ ಮೊದಲಿಗರೆನಿಸಿದರು ಕೇಜ್ರೀವಾಲ್.

ಇಂಡಿಯಾ ಒಕ್ಕೂಟದಲ್ಲಿ ಕಾಂಗ್ರೆಸ್ ಪಕ್ಷದ ವಿನಾ ಉಳಿದೆಲ್ಲ ಘಟಕ ಪಕ್ಷಗಳು ಕೇಜ್ರೀವಾಲ್ ಖುಲಾಸೆಯನ್ನು ಸ್ವಾಗತಿಸಿವೆ. ಪ್ರತಿಪಕ್ಷಗಳ ನಡುವಣ ಒಡಕಿಗೂ ಕನ್ನಡಿ ಹಿಡಿದಿರುವ ವಿದ್ಯಮಾನವಿದು.

ದೆಹಲಿಯನ್ನು ಬಿಟ್ಟರೆ ಆಮ್ ಆದ್ಮೀ ಪಾರ್ಟಿ ಬಹುಮತ ಪಡೆದು ಸರ್ಕಾರ ರಚಿಸಿದ್ದು ಪಂಜಾಬಿನಲ್ಲಿ. ಪಂಜಾಬ್ ಇದೀಗ ಮತ್ತೊಂದು ವಿಧಾನಸಭಾ ಚುನಾವಣೆಯ ಹೊಸ್ತಿಲಿನಲ್ಲಿದೆ. ಪುಟ್ಟ ರಾಜ್ಯ ಗೋವಾದ ಮೇಲೆಯೂ ಕಣ್ಣಿಟ್ಟಿರುವ ಪಕ್ಷವಿದು. ಈ ಸಂದರ್ಭಕ್ಕೆ ಸರಿಯಾಗಿ ಕೇಜ್ರೀವಾಲ್ ಖುಲಾಸೆಯಾಗಿದೆ. ದೆಹಲಿ ಚುನಾವಣೆ ಸೋಲಿನ ನಂತರ ಅಜ್ಞಾತವಾಸಿಯೇ ಆಗಿದ್ದರು ಕೇಜ್ರೀವಾಲ್. ಇದೀಗ ಪುನಃ ಪ್ರಚಾರದ ಮುಂಬೆಳಕಿಗೆ ಬರುತ್ತಾರೆಯೇ ಅಥವಾ ತೆರೆಮರೆಯಲ್ಲೇ ಉಳಿದು ಭಿನ್ನ ರಣತಂತ್ರ ಹೆಣೆಯುತ್ತಾರೆಯೇ ಎಂಬುದು ಕಾಲದ ತೀರ್ಮಾನಕ್ಕೆ ಬಿಟ್ಟ ವಿಚಾರ.

ಸಾಮಾಜಿಕ ನ್ಯಾಯದ ಕಗ್ಗೊಲೆಗೆ ಸಿದ್ಧವಾದ ಸಿದ್ದರಾಮಯ್ಯ ಸರ್ಕಾರ



ನಮ್ಮ ಸಂವಿಧಾನಬದ್ಧ ಹಕ್ಕು ಸಿಕ್ಕಿದೆ ಎಂದು ನಾವು ಸಂಭ್ರಮಿಸುತ್ತಿರುವ ಹೊತ್ತಲ್ಲೇ, ಸಿಕ್ಕ ನ್ಯಾಯವನ್ನು ಜಾರಿಗೆ ತರದಂತೆ ವ್ಯವಸ್ಥಿತವಾದ ಒಳಸಂಚು ನಡೆಯುತ್ತಿರುವುದು ಕ್ರೂರ ಅಸ್ಪೃಶ್ಯತೆಯ ಮತ್ತೊಂದು ರೂಪವೇ ಆಗಿದೆ.

ರಾಜ್ಯಪಾಲರು ಒಳಮೀಸಲಾತಿ ಬಿಲ್‌ಗೆ ಅಂಕಿತ ಹಾಕಿದ ಮೇಲೂ, ಸರ್ಕಾರ ಹಳೆಯ ಪದ್ಧತಿಯಲ್ಲೇ 56,432 ಹುದ್ದೆಗಳ ನೇಮಕಾತಿಗೆ ಮುಂದಾಗಿರುವುದು ಕೇವಲ ಆಡಳಿತಾತ್ಮಕ ನಿರ್ಧಾರವಲ್ಲ; ಇದು ಮಾದಿಗ ಮತ್ತು ಇತರ ಶೋಷಿತ ಸಮುದಾಯಗಳ ದಶಕಗಳ ಹೋರಾಟಕ್ಕೆ ಬಗೆದ ದ್ರೋಹ.

ಮಾನ್ಯ ಮುಖ್ಯಮಂತ್ರಿ ಹಾಗೂ ಸಚಿವರುಗಳೇ, ಕಣ್ಣೊರೆಸುವ ತಂತ್ರ ಬೇಡ. ಒಂದು ಕೈಯಲ್ಲಿ ಒಳಮೀಸಲಾತಿಯ ಹಕ್ಕು ಕೊಟ್ಟಂತೆ ಕೊಟ್ಟು,ನಟಿಸಿ, ಇನ್ನೊಂದು ಕೈಯಲ್ಲಿ ಸಾವಿರಾರು ಉದ್ಯೋಗಗಳನ್ನು ಹಳೆಯ ಪದ್ಧತಿಯಲ್ಲೇ ಭರ್ತಿ ಮಾಡಲು ಹೊರಟಿರುವುದು ಶೋಷಿತರ ಬದುಕಿನ ಜೊತೆ ಆಡುತ್ತಿರುವ ಕ್ರೂರ ಚೆಲ್ಲಾಟವೇ ಸರಿ. ನಿಮ್ಮ ಸರ್ಕಾರ ಕಾನೂನು ಮತ್ತು ಸಂವಿಧಾನವನ್ನು ಗೌರವಿಸುವುದೇ ಆಗಿದ್ದಲ್ಲಿ ಪ್ರತಿಯೊಂದು ನೇಮಕಾತಿಯಲ್ಲೂ ಒಳಮೀಸಲಾತಿ ಜಾರಿಯಾಗಲೇಬೇಕು. ಇಲ್ಲವಾದಲ್ಲಿ ಮಾದಿಗ ಸಮುದಾಯ ನಿಮ್ಮನ್ನು ಎಂದಿಗೂ ಕ್ಷಮಿಸಲಾರದು. ನಾಡಿನಾದ್ಯಂತ ನಿಮ್ಮ ರಾಜಕೀಯದ ಶಕ್ತಿಯನ್ನು ಕುಗ್ಗಿಸುವುದಕ್ಕೆ ಇಡೀ ಸಮುದಾಯವೇ ಶ್ರಮಿಸುತ್ತದೆ, ಎಚ್ಚರ!

ನಿಮ್ಮ ಸರ್ಕಾರಕ್ಕೆ ಕಿಂಚಿತ್ತಾದರೂ ನೈತಿಕ ಹೊಣೆಗಾರಿಕೆ ಇದೆಯೇ? ನಿಮಗೆ ಬದ್ಧತೆ ಇಲ್ಲವೇ? ನೀವೇ ತಂದ ಕಾನೂನನ್ನು ನೀವೇ ಜಾಣತನದಿಂದ ಕಡೆಗಣಿಸುತ್ತಿರುವುದು ಏಕೆ? ಕಾಗದದ ಮೇಲಷ್ಟೇ ನ್ಯಾಯವೇ? ಗೆಜೆಟ್‌ನಲ್ಲಿ ದಾಖಲಾದ ನ್ಯಾಯದ ಮಾತು ಕಡತದಿಂದ ಕಚೇರಿಯ ನೇಮಕಾತಿ ಪಟ್ಟಿಗೆ ಇಳಿಯದಿದ್ದರೆ ಆ ಮಾತಿಗೆ ಬೆಲೆ ಎಲ್ಲಿದೆ? ಇದು ಸಾಮಾಜಿಕ ನ್ಯಾಯದ ಹೆಸರಲ್ಲಿ ನಡೆಯುತ್ತಿರುವ ಅಕ್ಷರಶಃ ವಂಚನೆ. ಶತಮಾನಗಳಿಂದ ತುಳಿತಕ್ಕೊಳಗಾದ ಸಮುದಾಯಕ್ಕೆ ಇಂದು ಸಿಕ್ಕ ಜಯವನ್ನು ತಾಂತ್ರಿಕ ಕಾರಣ ನೀಡಿ ಕಸಿದುಕೊಳ್ಳಲಾಗುತ್ತಿದೆ. ನಮಗೆ ಬೇಕಿರುವುದು ಭರವಸೆಯ ಬಣ್ಣದ ಮಾತುಗಳಲ್ಲ, ಉದ್ಯೋಗಗಳಲ್ಲಿ ನಮ್ಮ ಪಾಲಿನ ಸಾಂವಿಧಾನಿಕ ಹಕ್ಕು. ನಿಮ್ಮಲ್ಲಿ ನಾವು ಬಿಕ್ಷೆ ಬೇಡುತ್ತಿಲ್ಲ, ನಮಗೆ ದಕ್ಕಬೇಕಾದ ನ್ಯಾಯಬದ್ಧ ಹಕ್ಕನ್ನು ಮಾತ್ರವೇ ಕೇಳುತ್ತಿದ್ದೇವೆ.

ಮಾದಿಗ ಸಮುದಾಯದ ಬಂಧುಗಳೇ, ಇನ್ನೂ ನಾವು ಜಾಗೃತರಾಗದಿದ್ದರೆ ನಷ್ಟವಾಗುವುದು ನಮಗೇ, ನಮ್ಮ ಭವಿಷ್ಯಕ್ಕೇ, ನೆನಪಿರಲಿ! ಎಚ್ಚರಗೊಳ್ಳಿ, ಸರ್ಕಾರವು ಸಾಮಾಜಿಕ ನ್ಯಾಯಕ್ಕೆ ಬಗೆಯುತ್ತಿರುವ ದ್ರೋಹವನ್ನು ಕಂಡಕಂಡಲ್ಲಿ ಖಂಡಿಸಿ. ಹೋರಾಟದ ಹಾದಿಗೆ ಮತ್ತೆ ನಾವು ಸಿದ್ಧರಾಗಬೇಕಿದೆ, ನಮ್ಮ ಹಕ್ಕನ್ನು ನಾವು ಪಡೆದೇ ತೀರಬೇಕಿದೆ.

ನಮ್ಮ ಸಂವಿಧಾನಬದ್ಧ ಹಕ್ಕು ಸಿಕ್ಕಿದೆ ಎಂದು ನಾವು ಸಂಭ್ರಮಿಸುತ್ತಿರುವ ಹೊತ್ತಲ್ಲೇ, ಸಿಕ್ಕ ನ್ಯಾಯವನ್ನು ಜಾರಿಗೆ ತರದಂತೆ ವ್ಯವಸ್ಥಿತವಾದ ಒಳಸಂಚು ನಡೆಯುತ್ತಿರುವುದು ಕ್ರೂರ ಅಸ್ಪೃಶ್ಯತೆಯ ಮತ್ತೊಂದು ರೂಪವೇ ಆಗಿದೆ. 56,432 ಹುದ್ದೆಗಳು ಹಳೆಯ ಮೀಸಲಾತಿಯಡಿ ಭರ್ತಿಯಾದರೆ, ನಮ್ಮ ಯುವಕರ ಭವಿಷ್ಯ ಮತ್ತೆ ಇಪ್ಪತ್ತು ವರ್ಷಗಳ ಕಾಲ ಕಗ್ಗತ್ತಲಿಗೆ ಸರಿಯಲಿದೆ. ಈಗ ಎಚ್ಚೆತ್ತು ಧ್ವನಿ ಎತ್ತದಿದ್ದರೆ, ಮಾದಿಗರಿಗೆ ಸರ್ಕಾರದಿಂದ ಮರಣ ಶಾಸನ ಗ್ಯಾರಂಟಿ.

ಮಾನ್ಯ ಮುಖ್ಯಮಂತ್ರಿಗಳೇ , ಸಚಿವರುಗಳೇ, ಶಾಸಕರುಗಳೇ ಸಮತೆ, ಸಾಮಾಜಿಕ ನ್ಯಾಯ, ಸಂವಿಧಾನಕ್ಕೆ ಬದ್ಧರಾಗಿದ್ದೇವೆ ಎಂದು ಉದ್ದುದ ಭಾಷಣ ಬಿಗಿಯುತ್ತೀರಿ! ಅದಕ್ಕೆ ತಕ್ಕುದಾದ ಬದ್ಧತೆ ಇರಬೇಕಾದದ್ದು ಬರೀ ಭಾಷಣದಲ್ಲಲ್ಲ, ನಿಮ್ಮ ನಡೆಯಲ್ಲೂ ಇರಬೇಕು. ರಾಜ್ಯಪಾಲರ ಅಂಕಿತದ ನಂತರವೂ ಹಳೆಯ ಪದ್ಧತಿಯನ್ನು ಅನುಸರಿಸುವುದು ಸಂವಿಧಾನದ ನಿಂದನೆ ಮಾತ್ರವಲ್ಲ, ಜನರ ನಂಬಿಕೆಗೆ ಮಾಡುವ ಅಪಚಾರ, ಮಾದಿಗ ಸಮುದಾಯಕ್ಕೆ ಎಸೆದ ಅತಿದೊಡ್ಡ ದ್ರೋಹ ಕೂಡ. ಹಾಗಾಗಿ, 56,432 ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ರಾಜ್ಯಪಾಲರ ಅಂಕಿತದ ಅನುಸಾರದಂತೆ ಒಳಮೀಸಲಾತಿಯನ್ನು ಜಾರಿಗೆ ತರುವಂತೆ ಶೀಘ್ರಾತಿಶೀಘ್ರದಲ್ಲಿ ಆದೇಶ ಹೊರಡಿಸಬೇಕು, ಇಲ್ಲವೇ, ಮಾದಿಗರ, ಮಾದಿಗ ಸಂಬಂಧಿತ ಎಲ್ಲ ಜಾತಿಸಮುದಾಯಗಳ ಹಾಗೂ ಸಾಮಾಜಿಕ ನ್ಯಾಯದ ಪರವಾಗಿರುವ ಎಲ್ಲ ನಾಗರಿಕರ ಕಟು ವಿರೋಧಕ್ಕೆ- ನಿಮ್ಮ ಮುಂದಿನ ಚುನಾವಣಾ ಭವಿಷ್ಯವನ್ನೇ ನಿರ್ಧರಿಸುವಂತಹ ನಿರ್ಣಾಯಕ ವಿರೋಧಕ್ಕೆ- ನೀವು ಗುರಿಯಾಗಬೇಕು. ಆಯ್ಕೆ ನಿಮ್ಮದು.

ಉಳ್ಳವರ ಆರ್ಥಿಕ ನೀತಿಗಳಿಂದ ಕುದಿಯುತ್ತಿರುವ ಜಗತ್ತು; ಕ್ರಾಂತಿಯಾಗಲೇಬೇಕಿರುವ ಕಾಲವಿದು!

ಮಾರ್ಕ್ಸ್ ವಾದ, ಗಾಂಧಿವಾದ, ಅಂಬೇಡ್ಕರ್ ವಾದಗಳಲ್ಲಿ ಪರಿಹಾರ ಹುಡುಕಿದರೂ ಈಗಿನ ನಾಶದ ವೇಗ ನೋಡಿದರೆ, ಒಂದೋ ಜಗತ್ತಿನಾದ್ಯಂತ ಬೃಹತ್ ಕ್ರಾಂತಿಯಾಗಿ ಹೊಸ ಆರ್ಥಿಕ ನೀತಿ ಜಾರಿಯಾಗಬೇಕು; ಇಲ್ಲದಿದ್ದರೆ ಲೋಕ ನಾಶವಾಗಬೇಕು!

ಜಗತ್ತಿನ ಆರ್ಥಿಕ ನೀತಿಗಳು ಒಂದು ನಿರ್ಣಾಯಕ ಹಂತಕ್ಕೆ ಬಂದು ತಲುಪಿರುವಂತೆ ಕಾಣುತ್ತಿದೆ. ಇದಕ್ಕೆ ಜಗತ್ತಿನ ದೊಡ್ಡಣ್ಣನೆಂದು ಕರೆಸಿಕೊಂಡಿರುವ ಅಮೆರಿಕವೇ ನಡುಗಿ ಹೋಗುತ್ತಿರುವುದನ್ನು ನೋಡಬಹುದು. ಇದಕ್ಕೆ ಬರಿದಾಗುತ್ತಿರುವ ಭೂಮಿಯ ಖನಿಜ, ತಾಪಮಾನ, ತಂತ್ರಜ್ಞಾನ ಹಾಗೂ ಜಗತ್ತಿನಾದ್ಯಂತ ಶತಕೋಟಿಯ ಶ್ರೀಮಂತರು ವಿಶ್ವಬ್ಯಾಂಕ್, ವಿಶ್ವಸಂಸ್ಥೆ, ಆಮದು ರಫ್ತು ನೀತಿ ಹಾಗೂ ಶೇರು ಮಾರುಕಟ್ಟೆಯ ಮೂಲಕ ನಡೆಸಿದ ದಾಂಧಲೆಯೂ ಇವತ್ತು ಎಲ್ಲವನ್ನು, ಎಲ್ಲರನ್ನು ಅಪೋಶನ ತೆಗೆದುಕೊಳ್ಳುವಂತೆ ಮಾಡುತ್ತಿದೆ.



ಇದಕ್ಕೆ ಪರ್ಯಾಯವಾಗಿ ಮಾರ್ಕ್ಸ್ ವಾದ, ಗಾಂಧಿವಾದ, ಅಂಬೇಡ್ಕರ್ ವಾದಗಳಲ್ಲಿ ಪರಿಹಾರ ಹುಡುಕಿದರೂ ಈಗಿನ ನಾಶದ ವೇಗ ನೋಡಿದರೆ, ಇಲ್ಲ! ಜಗತ್ತಿನಾದ್ಯಂತ ಬೃಹತ್ ಕ್ರಾಂತಿಯಾಗಿ ಹೊಸ ಆರ್ಥಿಕ ನೀತಿ ಜಾರಿಯಾಗಬೇಕು; ಇಲ್ಲದಿದ್ದರೆ ಲೋಕ ನಾಶವಾಗಬೇಕು. ಮಧ್ಯಮ ಮಾರ್ಗಕ್ಕೆ ಬೇಕಾದ ಸಂಯಮ, ತಾಳ್ಮೆ ಈಗ ಯಾರಲ್ಲೂ ಉಳಿದಿಲ್ಲ. ಹಿಂದೆ ತೇಜಸ್ವಿಯವರು, ಜನಾರ್ದನ್ ಪೂಜಾರಿಯವರು ಕೇಂದ್ರ ಸಚಿವರಾಗಿ ತಂದ ಸಾಲದ ಯೋಜನೆಯ ಬಗ್ಗೆ ಬರೆಯುತ್ತಾ, ''ಇದು ಮನ್ನಾ ಆಗೋ ಸಾಲ, ಯಾರು ಕಟ್ಟುವ ಅವಶ್ಯಕತೆ ಇಲ್ಲ'' ಎಂದು ಹೇಳಿ ಅದಕ್ಕೆ ಅರ್ಥಶಾಸ್ತ್ರಜ್ಞರು ಪ್ರತಿಕ್ರಿಯೆ ಕೊಡಲು ಶುರುಮಾಡಿದ ಮೇಲೆ ಇವರು ಪ್ರತಿಕ್ರಿಯೆ ಕೊಡಲು ಇಷ್ಟು ಚಿವುಟಬೇಕಾಯಿತಲ್ಲ ಎನ್ನುವ ಅರ್ಥದಲ್ಲಿ ಹೇಳುತ್ತಾರೆ. ಕಡೆಗೆ ತೇಜಸ್ವಿ ಹಾಗೂ ಪ್ರೊ. ನಂಜುಂಡಸ್ವಾಮಿಯವರಿಗೆ ಜಾಗತೀಕರಣದ ಮೇಲೆ ತೀವ್ರವಾದ ವಾಗ್ವಾದಗಳಾಗುತ್ತವೆ. ಅದಕ್ಕೆ ನಂಜುಂಡಸ್ವಾಮಿ ಸಮರ್ಥವಾಗಿ ಉತ್ತರಕೊಡುವುದು ಮಾಡಿದರೂ ಇವತ್ತಿಗೂ ಈ ಚರ್ಚೆಯ ಭಾಗವಾಗೇ ನಾವು ನಿಂತಿದ್ದೇವೆ ಅನಿಸುತ್ತೆ.

ಇತ್ತೀಚೆಗೆ ರೈತ ಹೋರಾಟಗಾರರು ಸಫಾರಿ ನಿಲ್ಲಿಸಿ, ರೆಸಾರ್ಟ್ ನಿಲ್ಲಿಸಿ, ನಮ್ಮ ಹೊಲಕ್ಕೆ ಬನ್ನಿ ಎಂದು ಕರೆ ನೀಡುತ್ತಿರುವುದರ ಹಿಂದಿನ ಆರ್ಥಿಕ ವಿಶ್ಲೇಷಣೆ ಗಮನಿಸಿ ಜಗತ್ತಿನ ಆರ್ಥಿಕ ನೀತಿಯನ್ನು ವಿಶ್ಲೇಷಿಸಬಹುದು. ಸಫಾರಿ, ರೆಸಾರ್ಟ್ ಗಳಿಂದ ರೈತರ ಹೊಲಗಳಿಗೆ ಕಾಡುಪ್ರಾಣಿಗಳು ಬರುತ್ತವೆ. ಕಾಡು ರೆಸಾರ್ಟ್ ಪಾಲಾಗುತ್ತದೆ. ರೆಸಾರ್ಟ್ ಗಳ ಐಷಾರಾಮಿತನದಿಂದ ಪರಿಸರ ನಾಶವಾಗುತ್ತದೆ ಎಂಬುದು ರೈತರ ವಾದ. ಈ ಸಂಘರ್ಷ ಸ್ಥಳೀಯವಾಗಿ ಇದ್ದರೂ ಜಾಗತಿಕ ಆರ್ಥಿಕ ನೀತಿಗಳನ್ನು ಗಮನಿಸಿದರೆ ಅತಿ ದೊಡ್ಡ ಶ್ರೀಮಂತರ ಆರ್ಥಿಕ ನೀತಿಗಳಿಗೂ ಜನಸಾಮಾನ್ಯರ ಆರ್ಥಿಕ ನೀತಿಗಳ ನಡುವೆ ಇಂಥದ್ದೇ ದೊಡ್ಡ ಸಂಘರ್ಷವಾಗುವ ಸಾಧ್ಯತೆ ಎದ್ದು ಕಾಣುತ್ತಿದೆ.

ಇದಕ್ಕೆ ಪೂರಕವಾಗಿ ಎಪ್ಸ್ಟೀನ್ ಫೈಲ್ಸ್ ನಿಂದ ಆಚೆ ಬಂದ ಸತ್ಯಗಳು ನಿಜಕ್ಕೂ ಗಾಬರಿಬೀಳಿಸುವಂತಿವೆ. ಹೊರನೋಟಕ್ಕೆ ಪ್ರಜಾಪ್ರಭುತ್ವದ ವ್ಯವಸ್ಥೆ ಇದ್ದರೂ ಒಳಗೊಳಗೆ ಅತಿ ಶ್ರೀಮಂತರ ಎಲೈಟ್ ಕ್ಲಾಸ್‌ಗಳೇ ಜಗತ್ತಿನ ಆರ್ಥಿಕ ನೀತಿಗಳನ್ನು ತಮ್ಮ ಕಪಿಮುಷ್ಟಿಯಲ್ಲಿ ಇಟ್ಟುಕೊಂಡಿದೆಯೇನೋ ಅನಿಸುತ್ತಿದೆ. ನಮ್ಮ ದೇಶದ ಪ್ರಧಾನ ಸೇವಕರು ಇಸ್ರೇಲ್ ಮುಂದೆ ಅಮೆರಿಕ ಮುಂದೆ ಹಲ್ಕಿರಿದು ನಿಂತಿರುವುದು ನೋಡಿದರೆ ಇದು ಅರಿವಿಗೆ ಬರುತ್ತದೆ.

ಅಮೆರಿಕ, ಇಸ್ರೇಲ್ ಜಾಗತಿಕವಾಗಿ ತೃತೀಯ ರಾಷ್ಟ್ರಗಳನ್ನು ಹೆದರಿಸಿ, ಬೆದರಿಸಿ ತಮ್ಮ ವಶದಲ್ಲಿ ಇಟ್ಟುಕೊಳ್ಳುತ್ತಿವೆ. ಇದಕ್ಕೆ ಯುರೋಪ್ ಪಡೆಗಳು ಕೆಲವೊಮ್ಮೆ ಪ್ರತಿರೋಧ ಒಡ್ಡಿದರೂ ಈ ನ್ಯಾಟೋ ಪಡೆಗಳು ಬಿಳಿಚರ್ಮದವರ ಪರವೇ ಎಂದು ಹಲವಾರು ಬಾರಿ ಸಾಬೀತುಪಡಿಸಿವೆ. ನಮ್ಮ ಭಾರತದಲ್ಲಿ ನೆಹರೂ ಆರ್ಥಿಕ ನೀತಿಗಳನ್ನು ಟೀಕಿಸಿದ ಲೋಹಿಯಾರವರು ಗಾಂಧಿ ಪ್ರಣೀತ ಆರ್ಥಿಕ ನೀತಿಯ ಬದಲಾಗಿ ಸಣ್ಣ ಕೈಗಾರಿಕೆಗಳ ಮಿತಿಯುಳ್ಳ ಬದುಕಿನ ಮಧ್ಯಮ ಮಾರ್ಗದ ವಿಶ್ಲೇಷಣೆ ಮಾಡಿದ್ದರು. ಯಾಕೆಂದರೆ, ಇಂದು ಆಧುನಿಕತೆಯ ಹೆಸರಲ್ಲಿ ಎಲೈಟ್ ಕ್ಲಾಸ್ ಗಳು ರೂಪಿಸಿರುವ ಮಜಾವಾದಿ ಸಿದ್ದಾಂತಗಳ ಕಡೆಗೆ, ಮಕ್ಕಳ ಮೇಲಿನ ಲೈಂಗಿಕತೆಗೆ, ಮಕ್ಕಳ ಮೇಲಿನ ಬಾಂಬುಗಳ ಸುರಿಮಳೆಯಲ್ಲಿ ಬಂದು ನಿಂತಿರುವುದನ್ನು ಈ ಇಪ್ಪತ್ತೊಂದನೆಯ ಶತಮಾನ ಕಣ್ಣಾರೆ ಕಂಡಿದೆ. ಬಹುಷಃ ಎಪ್ಸ್ಟೀನ್ ಫೈಲ್‌ಗಳು ಮಕ್ಕಳ ಮೇಲಿನ ದೌರ್ಜನ್ಯದ ಭಾಗವಾಗಿ ಪರಿಸರದ ಮೇಲಿನ ದೌರ್ಜನ್ಯವನ್ನೂ ಅಷ್ಟೇ ಸಲೀಸಾಗಿ ಪರಿಗಣಿಸಿವೆ.

ಇಂಥದ್ದೇ ಆರ್ಥಿಕ ನೀತಿಯನ್ನು ನೆಚ್ಚಿಕೊಂಡ ಬೆಂಗಳೂರು ಬೆಳೆಯುತ್ತಿರುವ ವೇಗವನ್ನು ಗಮನಿಸಿದರೆ ಗೊತ್ತಾಗುತ್ತದೆ. ನಮ್ಮ ಕರ್ನಾಟಕದ ಬಜೆಟ್ ನ ನಾಲ್ಕರಷ್ಟು ಹಣ ಖಾಸಗಿಯವರಿಂದ ಹರಿದು ಬರುತ್ತದೆಯಂತೆ. ಅದಕ್ಕೆ ಏನು ಬೇಕು? ಲಕ್ಷಗಟ್ಟಲೆ ಲೀಟರ್ ನೀರು ಬೇಕು, ಭೂಮಿ ಬೇಕು, ಬಡವರನ್ನು ಎತ್ತಂಗಡಿ ಮಾಡಬೇಕು, ಕಾಡು ನಾಶವಾಗಬೇಕು, ಕೆರೆಗಳು ಬತ್ತಿ ಹೋಗಬೇಕು. ಕಡೆಗೆ ಕಲುಷಿತ ನೀರು, ಕಲುಷಿತ ಆಹಾರ, ಕಲುಷಿತ ಗಾಳಿ, ನೀರಿಗೆ ಅಭಾವ ಇದು ನಮ್ಮ ನಾಗರೀಕತೆಯಾಗಬೇಕು? ಇದು ಅತ್ಯಂತ ಅನಾಗರೀಕ ಪ್ರಪಂಚವಲ್ಲದೆ ಮತ್ತೇನು?

ಈಗಾಗಲೇ ಕ್ವಾಂಟಂ ತಂತ್ರಜ್ಞಾನವು ಮನುಷ್ಯನನ್ನು ಸೂಪರ್ ಹ್ಯೂಮನ್ ಮಾಡುವ ಕಡೆ ಧಾಪುಗಾಲು ಇಡುತ್ತಿದೆ. ಸಣ್ಣಸಣ್ಣ ಮೈಕ್ರೋ ರೊಬೋಟ್ಗಳು ದೇಹದೊಳಗೆ ಹೋಗಿ ಮನುಷ್ಯನನ್ನು ರೋಗ ಮುಕ್ತಗೊಳಿಸುತ್ತವೆ ಎಂದು ಹೇಳಲಾಗುತ್ತಿದೆ. ಜೆನೆಟಿಕ್ ಇಂಜಿನಿಯರ್ ಅಂತೂ ಸ್ಮಾರ್ಟ್ ಹ್ಯೂಮನ್ಗಳನ್ನು ತಯಾರಿಸುವ ಕನಸು ಬಿತ್ತುತ್ತಿದೆ. ಈ ನಡುವೆ ಬಡವರು ಬಡವರಾಗೆ ಇದ್ದಾರೆ. ಅಮೆರಿಕಾದಂತವರ ಬೆದರಿಕೆಗೆ ಹಲ್ಕಿರಿದು ನಮ್ಮ ಪ್ರಧಾನ ಸೇವಕರು ನಿಲ್ಲುವಂತಾಗಿದೆ.

ಈಗಾಗಲೇ ನೆದರ್ ಲ್ಯಾಂಡ್ ನಂತ ರಾಷ್ಟ್ರಗಳು ಪರಿಸರ ಕಾಳಜಿಯ ಬಜೆಟ್ ಮಂಡಿಸುತ್ತಿವೆ. ಆರ್ಥಿಕ ನೀತಿಯಲ್ಲೂ ಇಕಾಲಜಿ ಮುಖ್ಯ ಪಾತ್ರವಹಿಸುತ್ತಿದೆ. ಇಂಥ ಪರಿಸರ ಸ್ನೇಹಿ, ನೈತಿಕ ಬದುಕಿಗೆ ಅಡ್ಡಗಾಲು ಹಾಕುತ್ತಿರುವವರೇ ಎಲೈಟ್ ಕ್ಲಾಸ್ ಎಂದು ಪರಿಸರ ನಾಶಕ್ಕೆ ಕಾರಣವಾಗಿರುವ ಎಪ್ಸ್ಟೀನ್ ಫೈಲ್ಸ್ ನಲ್ಲಿರುವ ಶತಕೋಟಿಯ ಶ್ರೀಮಂತರು ತಮ್ಮ ಆರ್ಥಿಕ ನೀತಿಯ ಮೂಲಕ ಸಾಬೀತುಪಡಿಸಿದ್ದಾರೆ. ಹಾಗಾಗಿ ಈಗಿರುವ ಆರ್ಥಿಕ ನೀತಿಗಳ ಬದಲಾವಣೆಗೆ ಹೊಸಕಾಲದ ಜೆನ್-ಜಿ ಯುವಕರು ಕಾರಣರಾಗಬಹುದು. ಯಾಕೆಂದರೆ ಈಗಾಗಲೇ ಐಟಿ ಬಿಟಿಯಿಂದ ಐಷಾರಾಮಿ ಬದುಕು ಕಾಣುತ್ತಿದ್ದವರಿಗೂ ಶಾಕ್ ಕೊಡುತ್ತಿದೆ.

ಕೂಲಿ, ಕೃಷಿ, ದೊಡ್ಡ ಕಂಪನಿಗಳ ಹೊಡೆತ, ಎಲ್ಲ ಬಗೆಯ ಕಾರ್ಮಿಕರಿಗೂ, ಎಲ್ಲ ಸ್ತರದ ಯುವಕರಿಗೂ ಇದು ಕೆಟ್ಟ ಕಾಲ. ಭವಿಷ್ಯವೇ ಕರಾಳವಾಗಿ ಕಾಣುತ್ತಿರುವ ಈ ಹೊತ್ತಿನಲ್ಲಿ ಮುಂದೆ ಭವಿಷ್ಯದ ವಾರಸುದಾರರು ಇವರೇ ಎನ್ನುವ ಹೊತ್ತಿನಲ್ಲಿ ಇವರು ಮುಂದೆ ರೂಪಿಸಬಹುದಾದ ಜಗತ್ತು ಈಗಿನ ಗುಲಾಮಗಿರಿಯ ಆರ್ಥಿಕನೀತಿಯ ಹೊರತಾಗಿರಬೇಕು. ಈಗಾಗಲೇ ಇಸ್ಲಾಂ ರಾಷ್ಟ್ರಗಳು ಒಂದು ಕಡೆಯಾದರೆ, ಅಮೆರಿಕ, ಇಸ್ರೇಲ್, ಯುರೋಪ್ ರಾಷ್ಟ್ರಗಳ ಹಿತಾಸಕ್ತಿಗಳೇ ಬೇರೆ. ಇನ್ನು ರಷ್ಯಾ, ಚೀನಾ ಸದ್ಯಕ್ಕೆ ಅಮೆರಿಕಗೆ, ಇಸ್ರೇಲ್ಗೆ ಸೆಡ್ಡು ಹೊಡೆಯಲು ಸಶಕ್ತ ರಾಷ್ಟ್ರಗಳಂತೆ ಕಾಣುತ್ತಿವೆ. ಇವೆಲ್ಲದರ ಮಧ್ಯೆ ನಮ್ಮಂಥ ತೃತೀಯ ರಾಷ್ಟ್ರಗಳ ನಿಲುವೇನು? ಮೂರನೇ ಮಹಾಯುದ್ದಕ್ಕೆ ಕ್ಷಣಗಣನೆ ಎನ್ನುತ್ತಿರುವಾಗ ಜಾಗತಿಕವಾಗಿ ಮನುಷ್ಯ ಕುಲ ಒಂದಾಗಿ ಪರಿಸರದ ಜೊತೆ ಹೆಜ್ಜೆ ಹಾಕಬೇಕಲ್ಲವೆ?

ನ್ಯಾಯಲಯಗಳು, ಸರ್ಕಾರಿ ವ್ಯವಸ್ಥೆ, ರಾಜಕೀಯ ವ್ಯವಸ್ಥೆಗಳೆಲ್ಲ ಉಳ್ಳವರ ಪರವಾಗಿ ವರ್ತಿಸುತ್ತಾ ಭ್ರಷ್ಟಚಾರ ಮಾಡುತ್ತಿದ್ದರೆ, ಜನ ಎಲ್ಲಿಯವರೆಗೆ ಸಹಿಸುತ್ತಾರೆ. ಬಹುಷ ಜಾಗತಿಕವಾಗಿ ಇದನ್ನೆಲ್ಲ ಮೀರಿ ಬದಲಾವಣೆ ತರಬಹುದಾದ ಕಲಾವಿದರು, ಸಾಹಿತಿಗಳು, ಹೋರಾಟಗಾರರು ಹೊಸ ತಲೆಮಾರಿನ ತವಕ ತಲ್ಲಣಗಳ ಜೊತೆ ನಿಲ್ಲಬೇಕಿದೆ. ಪ್ರಕೃತಿಯ ಜೊತೆ ನಿಲ್ಲಬೇಕಿದೆ. ಶುದ್ದ ಗಾಳಿ, ನೀರು, ಆಹಾರದ ಪರವಾಗಿ ನಿಲ್ಲಬೇಕಿದೆ. ಅದಕ್ಕೆ ಎಪ್ಸ್ಟೀನ್ ಫೈಲ್ಸ್ ಗಳಲ್ಲಿರುವ ಶತಕೋಟಿ ಶ್ರೀಮಂತರ ಜಾಗತಿಕ ಆರ್ಥಿಕ ನೀತಿಗಳನ್ನು ಪ್ರಶ್ನಿಸಬೇಕಿದೆ. ಇದಕ್ಕೆ ಜಗತ್ತು ಒಂದಾಗಿ ನಿಲ್ಲದಿದ್ದರೆ ಪ್ರಯೋಜನವಿಲ್ಲ. ಅಂಥ ದಿನಗಳಿಗಾಗಿ ಜಗತ್ತಿನಾದ್ಯಂತ ಒಂದು ಕುದಿಯಂತು ನಿರ್ಮಾಣವಾಗುತ್ತಿದೆ ಎಂದು ಅನಿಸುತ್ತಿದೆ.

ಇದಕ್ಕೆ ಉತ್ತರ, ರೈತ ಹೋರಾಟಗಾರರು ಪ್ರಕೃತಿ, ಕೃಷಿ, ರೆಸಾರ್ಟ್ ನಡುವೆ ನಿಮ್ಮ ಆಯ್ಕೆ ಯಾವುದು ಎನ್ನುವುದನ್ನು ಕೇಳುತ್ತಿರುವುದರಲ್ಲೇ ಇದೆ. ಇಲ್ಲದಿದ್ದರೆ ಭೂ ಕುಸಿತ, ಸರ್ವನಾಶಕ್ಕೆ ದಾರಿಯಂತೂ ಸುಗಮವಾಗಿ ಕಾಣುತ್ತಿದೆ. ವಿಪರ್ಯಾಸವೆಂದರೆ ಒಳ್ಳೆಯವರಾದಿಯಾಗಿ, ಎಪ್ಸ್ಟೀನ್ ಫೈಲ್ಸ್ ನ ಕೆಟ್ಟವರೂ ಸೇರಿದಂತೆ ಎಲ್ಲರೂ ನಾಶವಾಗುತ್ತೇವೆ. ಪರ್ಯಾಯ ಬೀಜಗಳು ಭೂಮಿಯಿಂದ ಮೊಳಕೆ ಒಡೆಯಲು ಭೂಮಿ ಹದಗೊಳ್ಳುವುದು ಈಗಿನ ಅನಿವಾರ್ಯತೆಯಾಗಿದೆ.

ಬಿಎಸ್‌ವೈ 84ನೇ ಹುಟ್ಟುಹಬ್ಬ: ಯಡಿಯೂರಪ್ಪನವರು ಶೀಘ್ರ ಕೋಪಿಯೇ ಹೊರತು, ಶೀಘ್ರ ದ್ವೇಷಿ ಅಲ್ಲ: ಜೋಶಿ

ಶಿವಮೊಗ್ಗ,ಫೆ.28–

ಬಿ.ಎಸ್. ಯಡಿಯೂರಪ್ಪ ಅವರು ಶೀಘ್ರ ಕೋಪಿಯೇ ಹೊರತು ಶೀಘ್ರ ದ್ವೇಷಿ ಅಲ್ಲ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ತಿಳಿಸಿದ್ದಾರೆ.

ಶಿಕಾರಿಪುರದ ಕುಮುದ್ವತಿ ಕಾಲೇಜು ಮೈದಾನದಲ್ಲಿ ನಿನ್ನೆ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರ 84ನೇ ವರ್ಷದ ಹುಟ್ಟುಹಬ್ಬ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಾನು (ಪ್ರಲ್ಹಾದ್ ಜೋಶಿ) ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷರಾಗಿದ್ದ ವೇಳೆ ಟಿಕೆಟ್ ಹಂಚಿಕೆ ವಿಚಾರದಲ್ಲಿ ನನಗೂ ಅವರಿಗೆ ಸ್ವಲ್ಪ ಗಲಾಟೆ ಆಗಿತ್ತು. ಆಗ ನಾನು ಅವರು ನನ್ನ ಚುನಾವಣಾ ಪ್ರಚಾರಕ್ಕೆ ಆಗಮಿಸುತ್ತಾರೋ ಇಲ್ಲವೂ ಎಂದುಕೊಂಡಿದ್ದೆ. ಆದರೆ, ಫೋನಾಯಿಸಿ 'ನಾನು ನಿನ್ನ ಚುನಾವಣಾ ಪ್ರಚಾರಕ್ಕೆ ಬರುತ್ತೆನೆಂದು' ಹೇಳಿ ಚುನಾವಣಾ ಪ್ರಚಾರಕ್ಕೆ ಆಗಮಿಸಿದ್ದರು ಎಂದು ನೆನಪು ಮಾಡಿಕೊಂಡರು.

ಯಡಿಯೂರಪ್ಪ ಅವರು ರಾಜ್ಯವನ್ನು ಅಭಿವೃದ್ದಿ ದಿಕ್ಕಿನಡೆ ಕರೆದುಕೊಂಡು ಹೋದರು. ಹೈದರಾಬಾದ್ ಕರ್ನಾಟಕವನ್ನು ಕಲ್ಯಾಣ ಕರ್ನಾಟಕ ಎಂದು ನಾಮಕಾರಣ ಮಾಡಿದರು, ಅದೇ ರೀತಿ ಮುಂಬೈ ಕರ್ನಾಟಕವನ್ನು ಕಿತ್ತೂರು ಕರ್ನಾಟಕ ಎಂದು ನಾಮಕರಣ ಮಾಡಿದರು. 2019 ರಲ್ಲಿ ಉತ್ತರ ಕರ್ನಾಟಕದಲ್ಲಿ ಬಂದ ಪ್ರವಾಹದಲ್ಲಿ ಮನೆ ಕಳೆದು ಕೊಂಡವರಿಗೆ 5 ಲಕ್ಷ ಘೋಷಣೆ ಮಾಡಿದರು. ರಾಜ್ಯದ ಜನತೆಗೆ ಶಿಕಾರಿಪುರ ಕ್ಷೇತ್ರ ಅಂದ್ರೆ ಗೊತ್ತಿರಲಿಲ್ಲ. ಆದರೆ, ಈಗ ಯಡಿಯೂರಪ್ಪ ಅಂದ್ರೆ ಶಿಕಾರಿಪುರ, ಶಿಕಾರಿಪುರ ಅಂದ್ರೆ ಯಡಿಯೂರಪ್ಪ ಎಂಬಂತೆ ಆಗಿದೆ. ಯಡಿಯೂರಪ್ಪನವರನ್ನು ಗೆಲ್ಲಿಸಿದ ಶಿಕಾರಿಪುರ ಜನತೆಗೆ ನನ್ನ ನಮಸ್ಕಾರ ಎಂದರು.

84 ವರ್ಷ ಅಂದ್ರೆ, ಸಹಸ್ರ ಚಂದ್ರ ದರ್ಶನ ಮಾಡಿದವರು ಯಡಿಯೂರಪ್ಪನವರು. ಶಿಕಾರಿಪುರ ಕ್ಷೇತ್ರದ ಜನರ ಸಹಕಾರದಿಂದ ಯಡಿಯೂರಪ್ಪನವರು ಪೂರ್ಣ ಚಂದ್ರನಂತೆ ಹೊಳೆಯುತ್ತಿದ್ದಾರೆ. ಯಡಿಯೂರಪ್ಪ ದಣಿವರೆಯದ ನಾಯಕರಾಗಿದ್ದಾರೆ. ಹಗಲು ರಾತ್ರಿ ಹೋರಾಟದ ಪರಿಕಲ್ಪನೆ ಕೊಟ್ಟವರು ಯಡಿಯೂರಪ್ಪನವರು ಎಂದರು

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR